ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2022
ಬೆಲೆ ರೂ. 1







**ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿ ವಿಜೃಂಭಿಸಿದ ಮಂಡ್ಯ, ಹಾಸನ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಮತ್ತು ದಾವಣಗೆರೆ ಜಿಲ್ಲೆಗಳ ಸಾಂಸ್ಕೃತಿಕ ವೈಭವ**




## ದೆಹಲಿ ಕನ್ನಡಿಗರಿಂದ ಅದ್ಭುತ ಯಶಸ್ಸು ಕಂಡ ಕೋಟಿ ಕಂಠ ಗೀತ ಗಾಯನ

ಕರ್ನಾಟಕ ಸರ್ಕಾರ ಕಳೆದ ವರ್ಷದಂತೆ ಈ ವರ್ಷವೂ ಸಹ ಕನ್ನಡ ರಾಜ್ಯೋತ್ಸವವನ್ನು ವಿನೂತನವಾಗಿ ಆಯೋಜಿಸಲು ಕನ್ನಡಪರ ಸಂಘ ಸಂಸ್ಥೆಗಳಿಗೆ ನೀಡಿದ್ದ ಸೂಚನೆಯಂತೆ ವಿಶೇಷ ರೀತಿಯ ಕೋಟಿ ಕಂಠ ಗೀತ ಗಾಯನ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಅಕ್ಟೊಬರ್ 28 ರಂದು ಆಯೋಜಿಸಲಾಗಿತ್ತು. ಕನ್ನಡದ ಹೆಸರಾಂತ ಕವಿಗಳಾದ ಕುವೆಂಪು, ಹುಯಿಲಗೋಳ ನಾರಾಯಣರಾಯರು, ಡಿ.ಎಸ್. ಕರ್ಕಿ, ಚನ್ನವೀರ ಕಣವಿ ಮತ್ತು ಹಂಸಲೇಖರವರ ಆಯ್ದ ಗೀತೆಗಳನ್ನು ಕರ್ನಾಟಕ ರಾಜ್ಯಾದ್ಯಂತ, ದೇಶದ ಹಲವೆಡೆ ಸೇರಿದಂತೆ ಏಕಕಾಲಕ್ಕೆ ನೂರಾರು ದೆಹಲಿ ಕನ್ನಡಿಗರು ಸೇರಿ ಸುಶ್ರಾವ್ಯವಾಗಿ ಹಾಡಿ ಯಶಸ್ವಿಗೊಳಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಹಾಗೂ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸದಸ್ಯರು ಕನ್ನಡ ಸಾಹಿತ್ಯ ಪರಿಷತ್, ದೆಹಲಿ ಘಟಕ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್, ದೆಹಲಿ ಘಟಕ, ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ, ಸ್ನೇಹಾ ದೆಹಲಿ ಲೇಡೀಸ್ ಅಸೋಸಿಯೇಷನ್ ಸೇರಿದಂತೆ ದೆಹಲಿಯ ಅನೇಕ ಸ್ಥಳೀಯ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

**ಅಭಿಮತ ವರದಿ**



**ಅಭಿನಂದನೆ**

ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಚುನಾಯಿತರಾದ ಮಾನ್ಯ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ ಜೆ ಅವರು ದೆಹಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸಿ ಅಭಿನಂದಿಸಿದ ಕ್ಷಣ

# ಅಭಿಮತ

ಸಂಪುಟ 33 । ಸಂಚಿಕೆ 2

**ನವೆಂಬರ್ 2022**



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು
ಕೆ.ಎಸ್. ಮೂರ್ತಿ
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ


## ಸಂಪಾದಕೀಯ

# "ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲೆ ಬೆಳಕು ಚೆಲ್ಲುವ 'ಅರಿವಿನ ದೀಪ'ವಾಗಲಿ ಕರ್ನಾಟಕ ರಾಜ್ಯೋತ್ಸವ"

'ತೇರನೆಳೆಯುವರು ನಾವು, ಎಲ್ಲಿದ್ದರೇನು, ಬೊಂಬಾಯಿ ಮದ್ರಾಸು, ಕಲ್ಕತ್ತ, ಡೆಲ್ಲಿ ಎಲ್ಲೆಂದರಲ್ಲಿ, ಕನ್ನಡದ ಉಸಿರಾಟ ಎದೆಗಳಿರುವಲ್ಲಿ'. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಕವಿವಾಣಿ ಎಲ್ಲ ಹೊರನಾಡ ಕನ್ನಡಿಗರ 'ಮಂತ್ರ'ವಾಗಲಿ ಎಂದು ಆಶಿಸುತ್ತಾ ಸಮಸ್ತ ಕನ್ನಡ ಮನಸ್ಸುಗಳಿಗೂ 67 ನೇ ಕರ್ನಾಟಕ ರಾಜ್ಯೋತ್ಸವದ ಹೃದಯಪೂರ್ವಕ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಬಂಧುಗಳೇ, ದೀಪಾವಳಿ ಆಚರಿಸಿ ಮನೆಗಳ ಮೂಲೆ ಮೂಲೆಗಳಲ್ಲೂ ಹಚ್ಚಿದ, ಹಣತೆಯ ಬೆಳಕಿನಿಂದ ಕತ್ತಲನ್ನು ಹೋಗಲಾಡಿಸಿ, ಮನೆ ತುಂಬಾ ಬೆಳಕನ್ನು ಹರಡಿ ಸಂಭ್ರಮಿಸಿದ ಬೆನ್ನಲ್ಲೇ ಬಂದಿರುವ ಕರ್ನಾಟಕ ರಾಜ್ಯೋತ್ಸವ 'ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲೆ ಬೆಳಕು ಚೆಲ್ಲುವ 'ಅರಿವಿನ ದೀಪ'ವಾಗಲಿ ಎನ್ನುವ ಆಶಯ ನನ್ನದು. ಪ್ರತಿವರ್ಷ ನವೆಂಬರ್‌ನಲ್ಲಿ ಕನ್ನಡ ಬಾವುಟ, ಕನ್ನಡ ಗೀತೆಗಳು, ಭಾಷಣಗಳು ಸೇರಿದಂತೆ ತರಹೇವಾರಿ ಚಟುವಟಿಕೆಗಳು ಕರ್ನಾಟಕ ಮಾತ್ರವಲ್ಲದೆ ಕನ್ನಡಿಗರು ಇರುವ ಎಲ್ಲ ರಾಜ್ಯಗಳೂ, ದೇಶಗಳಲ್ಲೂ ಅತ್ಯಂತ ಭಾವನಾತ್ಮಕವಾಗಿ ನಡೆಯುತ್ತವೆ. ಆದರೆ ಈ ಭಾವಾವೇಗ ದೀರ್ಘಕಾಲ ಉಳಿಯದೇ ನವೆಂಬರ್ ತಿಂಗಳಿಗಷ್ಟೇ ಏಕೆ ಸೀಮಿತವಾಗಿದೆ ಎನ್ನುವುದನ್ನು ಕನ್ನಡದ ಭವಿಷ್ಯದ ದೃಷ್ಟಿಯಿಂದ ಚಿಂತನೆಗೊಳಪಡಿಸಬೇಕಾಗಿದೆ. ನನಗನ್ನಿಸಿದಂತೆ ಇದಕ್ಕೆ ಇರುವ ಹಲವು ಕಾರಣಗಳಲ್ಲಿ 'ಕನ್ನಡ ಪರಸ್ಪರ ಸಂವಹನಕ್ಕಾಗಿ ಇರುವ ಭಾಷೆಯಷ್ಟೇ, ಇನ್ನೇನಿದೆ ಇದರಲ್ಲಿ ಕನ್ನಡ ಅನ್ನದ ಭಾಷೆಯಲ್ಲ ಹಾಗಾಗಿ ಏಕೆ ಬೇಕು' ಎಂದು ಬಹಳಷ್ಟು ಕನ್ನಡಿಗರು ಲಘುವಾಗಿ ಪರಿಗಣಿಸಿರುವುದೂ ಕಾರಣವಾಗಿದೆ. ಈ ಕಾರಣದ ಜೊತೆಗೆ ವಿಶ್ವೀಕರಣ, ನಗರೀಕರಣ, ಯಂತ್ರೀಕರಣ, ವ್ಯಾಪಾರೀಕರಣಗಳೆಲ್ಲ ಸೇರಿ 'ಕರ್ನಾಟಕದ ಏಕೀಕರಣ'ದ ಮೂಲ ಕಾರಣ ಮತ್ತು ಗುರಿಯನ್ನೇ ತಲೆಕೆಳಗು ಮಾಡುತ್ತಿರುವುದು ಅತ್ಯಂತ ಆತಂಕಕಾರಿ ಸಂಗತಿ.

ಏಕೀಕರಣ ಪೂರ್ವದಲ್ಲಿ ಇಪ್ಪತ್ತಕ್ಕೂ ಹೆಚ್ಚು ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳ ಜನರಲ್ಲಿ. "ನಾವು ಕನ್ನಡಿಗರು; 'ಕನ್ನಡ ಇರುವುದು ಸಂವಹನ'ಕ್ಕಾಗಿ ಮಾತ್ರವಲ್ಲ, ಕನ್ನಡ ನಮ್ಮ "ಭಾವ ಸಂವೇದನೆ"ಗಾಗಿ ಇರುವ ಶ್ರೀಮಂತ ಭಾಷೆ. ನಾವು ಒಂದು ಭವ್ಯ ಹಾಗೂ ಶ್ರೀಮಂತ ಸಂಸ್ಕೃತಿಯ ಪರಂಪರೆಯ ವಾರಸುದಾರರು" ಎಂಬ ನಿತ್ಯ ಸತ್ಯವನ್ನು ನೂರಾರು ಹೃದಯ ಸ್ಪರ್ಶಿ ಘಟನೆಗಳ ಮೂಲಕ ನಿರೂಪಿಸಿದ ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾವ್ ಸೇರಿದಂತೆ ಎಲ್ಲ ಧೀಮಂತರು ಕನ್ನಡದ ಸಂವೇದನೆ ಮತ್ತು ವೈಚಾರಿಕತೆಗಳ ಮುಖಾಮುಖಿಯನ್ನು ಪರಿಶೋಧಿಸಿ, ನೇಪಥ್ಯಕ್ಕೆ ಸರಿದುಹೋಗಿದ್ದ ಕನ್ನಡ ಭಾಷೆ, ಸಾಹಿತ್ಯ ಮತ್ತು ಕನ್ನಡಿಗರ ನಡುವಿನ ಅವಿನಾಭಾವ ಸಂಬಂಧಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳ ಜನರಲ್ಲಿ ಭಾವನಾತ್ಮಕ ಬೆಸುಗೆ ಬೆಸೆದು 1956ರಲ್ಲಿ 'ಕರ್ನಾಟಕದ ಏಕೀಕರಣ'ವನ್ನು ಸಾಧಿಸಿದರು.

ಆದರೆ, ಈ ಅರವತ್ತೇಳು ವರ್ಷಗಳಲ್ಲಿ ಅಧಿಕೃತ ಭಾಷಾ ಕಾಯ್ದೆ ಜಾರಿ ಮತ್ತು ಅದಕ್ಕೆ ಪೂರಕವಾದ ಆದೇಶಗಳನ್ನು ಜಾರಿ ತರಲು ಕನ್ನಡಕ್ಕೆ ಆಡಳಿತಾತ್ಮಕವಾಗಿ ಮತ್ತು ಪ್ರಾಯೋಗಿಕವಾಗಿ ಅಗತ್ಯ ಸೌಕರ್ಯಗಳನ್ನು ಒದಗಿಸಿ, ಎಲ್ಲ ಬಗೆಯ ಜ್ಞಾನ ಶಿಸ್ತುಗಳನ್ನು ಬೋಧಿಸಲು ಬೇಕಾದ ಪಾರಿಭಾಷಿಕ ಪದಸಂಪತ್ತನ್ನು ರೂಪಿಸಲು ಜಾಗೃತೆ ವಹಿಸುವಲ್ಲಿ ಮತ್ತು ಆದ್ಯತೆ ನೀಡುವಲ್ಲಿ ಮಂದಗತಿಯನ್ನು ಅನುಸರಿಸುತ್ತಾ ಬರಲಾಗಿದೆ. ಇದರ ಪರಿಣಾಮವೇನೆಂದರೆ, ಕನ್ನಡವನ್ನು ಅನ್ನದ ಭಾಷೆಯಾಗಿ ಮಾಡುವುದೂ ಒತ್ತಟ್ಟಿಗಿರಲಿ, ಕಲಿಕೆಯ ಮಾಧ್ಯಮವಾಗಿ ಉಳಿಸಿಕೊಳ್ಳಲಾಗದ ಸ್ಥಿತಿಗೆ ದೂಡಿರುವುದು ವಿಷಾಧನೀಯ. ವಿಪರ್ಯಾಸವೇನೆಂದರೆ, ಕೇವಲ ಒಂದು ಭಾಷೆಯಾಗಿ 'ಸಂವಹನ'ಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕಲಿಯಬೇಕಿದ್ದ ಇಂಗ್ಲಿಷ್ ಇಂದು ಶಿಕ್ಷಣದ ಮಾಧ್ಯಮವಾಗಿ ಬಹಳ ಮಹತ್ವದ ಸ್ಥಾನವನ್ನು ಆಶ್ರಯಿಸಿದೆ. ಆದರೆ ಈ ನೆಲದ ಮಕ್ಕಳು ತಮ್ಮ ತಾಯ್ನುಡಿ ಕನ್ನಡವನ್ನು ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಎರಡನೇ, ಇಲ್ಲವೇ ಮೂರನೇ ಭಾಷೆಯಾಗಿ ಕಲಿಯುವಂತಾಗಿರುವುದು ಶೋಚನೀಯವಲ್ಲದೇ ಬೇರೇನೂ ಅಲ್ಲ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರೂ ಸೇರಿದಂತೆ ಇದುವರೆಗೆ ಶಿಕ್ಷಣ ಮಾಧ್ಯಮದ ಎಲ್ಲರೂ ಮಕ್ಕಳು ತಮ್ಮ ಮಾತೃಭಾಷೆಯ ಮೂಲಕ ಯಾವುದೇ ವಿಷಯವನ್ನು ಸುಲಭವಾಗಿ ಕಲಿಯಬಲ್ಲರು ಎನ್ನುವ ವೈಜ್ಞಾನಿಕ ಚಿಂತನೆಯನ್ನೇ ಎತ್ತಿ ಹಿಡಿದಿದ್ದಾರೆ. ಇದು ಸತ್ಯ ಸಂಗತಿ ಎಂದು ಗೊತ್ತಿದ್ದರೂ ಕೂಡ ಇಂದು ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಮೂಲೆ ಮೂಲೆಯಲ್ಲಿರುವ ಹಳ್ಳಿಗಳಲ್ಲೂ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಪ್ರಾಶಸ್ತ್ಯ ದೊರೆಯುತ್ತಿದ್ದು ಕನ್ನಡ ಶಾಲೆಗಳು ಮಕ್ಕಳಿಲ್ಲದೆ ಬಾಗಿಲು ಮುಚ್ಚುವಂತಾಗಿದೆ. ಅಂತೆಯೇ ಕರ್ನಾಟಕ ರಾಜ್ಯ ರಚನೆಯಾದ ಈ ಅರವತ್ತೇಳು ವರ್ಷಗಳಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಪ್ರಯತ್ನಗಳು ಆಗಬೇಕಾಗಿದ್ದ ಪ್ರಮಾಣದಲ್ಲಿ, ವೇಗದಲ್ಲಿ ಮತ್ತು ಸ್ವರೂಪದಲ್ಲಿ ಆಗಿಲ್ಲ, ಇಷ್ಟೆಲ್ಲದರ ಜೊತೆಗೆ ಪರಭಾಷೆಗಳ ಪೈಪೋಟಿ ದಿನೇ ದಿನೇ ಹೆಚ್ಚುತ್ತಿರುವುದು ಕನ್ನಡದ ನೆಲದಲ್ಲೇ ಕನ್ನಡವನ್ನು ಅಪರಿಚಿತಗೊಳಿಸುವ ಮತ್ತು ಕನ್ನಡಿಗರಲ್ಲಿ ಆತ್ಮ ವಿಶ್ವಾಸವನ್ನು ಜರ್ಜರಿತಗೊಳಿಸುವಂತಾಗಿದೆ.

ಇಂತಹ ಆತಂಕವನ್ನು ದೂರಾಗಿಸಿ ಕನ್ನಡಿಗರ ಆತ್ಮ ವಿಶ್ವಾಸವನ್ನು ಪುಟಿದೇಳುವಂತೆ ಮಾಡಲು ನಮ್ಮ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ನಮಗೆ ಕೊಟ್ಟಿರುವ ಅವಕಾಶಗಳನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳುವುದಕ್ಕೆ ನಾವು ದಿಟ್ಟ ಪ್ರಯತ್ನ ಮಾಡಬೇಕು. ಮುಖ್ಯವಾಗಿ ನಮ್ಮ ಶಾಸ್ತ್ರೀಯ ಸ್ಥಾನಮಾನದ ಮನ್ನಣೆ ಕನ್ನಡ ಭಾಷೆಗೆ ದೊರಕಿದ್ದರೂ ಇದುವರೆಗೆ ತಮಿಳು ಮತ್ತು ಸಂಸ್ಕೃತ ಭಾಷೆಗಳಿಗೆ ದೊರಕಿರುವ ಪ್ರಮಾಣದಲ್ಲಿ ಅರ್ಥಿಕ ನೆರವು ಮತ್ತಿತರ ಸವಲತ್ತುಗಳು ದೊರಕದೆ ಇರುವುದರಿಂದ ಸರ್ಕಾರ ಮತ್ತು ಕನ್ನಡಪರ ಸಂಘಟನೆಗಳು ಈ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕಿದೆ. ಸಂವಿಧಾನದ ಎಂಟನೇ ಪರಿಚ್ಛೇದದಡಿಯಲ್ಲಿ ಮಾನ್ಯತೆ ಪಡೆದಿರುವ 22 ಭಾಷೆಗಳಲ್ಲಿ ಒಂದಾಗಿರುವ ಕನ್ನಡಕ್ಕೂ ಸೇರಿದಂತೆ ಎಲ್ಲ ಭಾಷೆಗಳಿಗೂ ಸಮಾನ ನೆರವು ಮತ್ತು ಸೌಲಭ್ಯವನ್ನು ಪಡೆಯಲು ಕಾರ್ಯ ಪ್ರವೃತ್ತರಾಗುವುದು, ಸಂಸತ್ತಿನಲ್ಲಿ ಅಂಗೀಕಾರವಾಗಿರುವ ತ್ರಿಭಾಷಾ ಸೂತ್ರದನ್ವಯ ಕನ್ನಡಕ್ಕೆ ಸಮಾನತೆ ಒದಗಿಸುವುದು. ಕನ್ನಡ ಭಾಷಾಂತರ ನಿರ್ದೇಶನಾಲಯಕ್ಕೆ ಶಕ್ತಿ ತುಂಬಿ ಆಧುನಿಕ ತಂತ್ರ ಜ್ಞಾನವನ್ನು ಬಳಸಿಕೊಂಡು ಕನ್ನಡದ ಅಭಿವೃದ್ಧಿ ಮಾಡಿ ಕೇಂದ್ರ ಸರ್ಕಾರ ನಡೆಸುವ ಎಲ್ಲ ಪರೀಕ್ಷೆಗಳಲ್ಲೂ ಕನ್ನಡ ಕಡ್ಡಾಯವಾಗಿರುವಂತೆ ಮಾಡುವುದು, ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಹಾಗೂ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದಕ್ಕೆ ಬೇಕಾದ ಕನ್ನಡದ ಪಾರಿಭಾಷಿಕ ಪದಕೋಶ, ತಂತ್ರಜ್ಞಾನ ಆಧಾರಿತ ಭಾಷಾಂತರ ವ್ಯವಸ್ಥೆ ಮತ್ತು ವಿಶ್ವಕೋಶಗಳನ್ನು ರೂಪಿಸಿ ಎಲ್ಲ ಬಗೆಯ ಜ್ಞಾನ ಶಿಸ್ತುಗಳನ್ನು ಕನ್ನಡದಲ್ಲಿ ಬೋಧಿಸಲು, ಅನುವಾದಿಸಲು ಕನ್ನಡವನ್ನು ಸಬಲೀಕರಣಗೊಳಿಸುವ ಈ ನಿಟ್ಟಿನಲ್ಲಿ ಸರ್ಕಾರಗಳು ಮತ್ತು ಕನ್ನಡ ಪರಸಂಘಟನೆಗಳು ಕಾರ್ಯಪ್ರವೃತ್ತರಾಗಲು ರಾಜ್ಯೋತ್ಸವದ ಆಚರಣೆ ಪ್ರೇರಣೆಯಾಗಲಿ.

ಬಂಧುಗಳೇ, ನಮ್ಮ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ನಡೆದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವ ಹಾಗು ಚಿಕ್ಕಮಗಳೂರು, ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಲೆನಾಡು ಸಾಂಸ್ಕೃತಿಕ ಉತ್ಸವದ ವರದಿಗಳೂ ಸೇರಿದಂತೆ ಇತರೆ ಕನ್ನಡ ಸಂಘ ಸಂಸ್ಥೆಗಳ ವರದಿಗಳನ್ನು ಹೊತ್ತ ಈ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ.

ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 33 ಸಂಚಿಕೆ 2
ನವೆಂಬರ್ 2022, ಬೆಲೆ ರೂ. 1

## ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ,

ತಮಗೆ, ತಮ್ಮ ಕುಟುಂಬಕ್ಕೆ 67 ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನವೆಂಬರ್ ತಿಂಗಳಲ್ಲಿ ಪ್ರತಿವಾರವೂ ಸಂಘದಲ್ಲಿ ಕಾರ್ಯಕ್ರಮಗಳು ನಡೆಯುತ್ತವೆ. ವಿಶೇಷವಾಗಿ ಕನ್ನಡ ಕಲಿಯುವ ಮಕ್ಕಳಿಗೆ ಮತ್ತು ಕೆಲ ಸದಸ್ಯರುಗಳಿಗೆ ವಾರದಲ್ಲಿ ಎರಡು ಬಾರಿ ಉಚಿತವಾಗಿ ಕನ್ನಡ ಕಲಿಸುವ ಕಾರ್ಯಾಗಾರ ಜೊತೆಗೆ ಶಾಸ್ತ್ರೀಯ ನೃತ್ಯ ತರಬೇತಿ ಶಿಬಿರ ಶನಿವಾರ ಮತ್ತು ಭಾನುವಾರ ನಡೆಯುತ್ತದೆ. ಹಿಂದೂಸ್ತಾನಿ ಸಂಗೀತವನ್ನು ಸಹ ಕಲಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಹೆಚ್ಚಿನ ಕನ್ನಡಿಗರು ಇರುವ ಜಾಗದಲ್ಲಿ ಕನ್ನಡ ಕಲಿಸುವ ಅಭಿಯಾನ ಮಾಡಲಿದ್ದೇವೆ. ಈ ಬಾರಿ ಲಾಜಪತ್ ನಗರ್ ಮತ್ತು ಆರ್.ಕೆ. ಪುರಂನಲ್ಲಿಯೂ ಕನ್ನಡವನ್ನು ಕಲಿಸುವ ಕೆಲಸ ನಡೆಯಲಿದೆ. ಈ ಎಲ್ಲ ಕಾರ್ಯಗಳಿಗೆ ಸಹಕಾರ ನೀಡುತ್ತಿರುವ ಕಾರ್ಯಕಾರಿ ಸಮಿತಿ ಮತ್ತು ಎಲೆ ಮರೆ ಕಾಯಿಯಂತೆ ನಮ್ಮ ಎಲ್ಲಾ ಕಾರ್ಯ ಕೆಲಸಗಳಿಗೆ ಸಹಕಾರ ನೀಡುತ್ತಿರುವ ನಮ್ಮ ಹಿತೈಷಿಗಳಿಗೆ ಧನ್ಯವಾದಗಳು.

ನಮ್ಮ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಅಂಗವಾಗಿ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವುದರಲ್ಲಿ ನಾವು ಯಶಸ್ವಿಯಾಗಿ ಮುನ್ನುಗ್ಗುತ್ತಿದ್ದೇವೆ. ಅಕ್ಟೋಬರ್ ತಿಂಗಳಲ್ಲಿ ದಿ 15 ಮತ್ತು 16 ರಂದು ನಡೆದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲೆಗಳ ಸಾಂಸ್ಕೃತಿಕ ಕಲಾ ಉತ್ಸವದಲ್ಲಿ ಮಂಡ್ಯದ ಶಾಲಾ ಮಕ್ಕಳಿಂದ ಮೂಡಲಪಾಯ ಯಕ್ಷಗಾನ 'ದೇವಿಮಹಾತ್ಮೆ' ಜೊತೆಗೆ ಕುವೆಂಪು ವಿರಚಿತ ನಾಟಕ 'ಸ್ಮಶಾನ ಕುರುಕ್ಷೇತ್ರಂ' ಬಗೆ ಬಗೆ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಈ ಕಾರ್ಯಕ್ರಮದಲ್ಲಿ ನೂರ ಐವತ್ತಕ್ಕೂ ಅಧಿಕ ಕಲಾವಿದರು ಭಾಗಿಯಾಗಿದ್ದಾರೆ. ಈ ಎರಡು ದಿನಗಳ ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾದ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಆಶೀರ್ವಾದದೊಂದಿಗೆ ಮಾನ್ಯ ಮಂಡ್ಯ, ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಗೋಪಾಲಯ್ಯ, ಮಾನ್ಯ ಮಾಜಿ ಸಚಿವರಾದ ಶ್ರೀ ಪುಟ್ಟರಾಜು, ಮಾಜಿ ಸಚಿವರಾದ ಶ್ರೀ ಚೆಲುವರಾಯಸ್ವಾಮಿ, ಮಾನ್ಯ ಮಂಡ್ಯ ವಿಧಾನಸಭಾ ಕ್ಷೇತ್ರ ಶಾಸಕರಾದ ಶ್ರೀ ಎಂ. ಶ್ರೀನಿವಾಸ್, ಮಾಜಿ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಬಿ. ರಾಮಕೃಷ್ಣ ಮತ್ತು ಶ್ರೀ ಕೆ.ಟಿ. ಶ್ರೀಕಂಠೇ ಗೌಡರು, ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಐ.ಆರ್.ಎಸ್. ಅಧಿಕಾರಿ ಶ್ರೀ ಜಯರಾಮ್ ರಾಯ್ ಪುರರವರು, ಐ.ಪಿ.ಎಸ್. ಅಧಿಕಾರಿ ಡಾ. ಬಿ.ಆರ್. ರವಿಕಾಂತೇಗೌಡರು, ತುಮಕೂರು ಕುಣಿಗಲ್‌ನ ಬಸವೇಶ್ವರ ಮಠದ ಬಿದನಗೆರೆ ಶ್ರೀ ಡಾ. ಧನಂಜಯ ಗುರೂಜಿಗಳು, ಮಿತ್ರರಾದ ಶ್ರೀ ರಾಜೇಶ್ ಗೌಡರು, ಬಿಜೆಪಿ ಮುಖಂಡರು, ಶ್ರೀ ಪಿ.ಸಿ. ಶ್ರೀನಿವಾಸ್, (ಸಿ.ಇ.ಓ, ಇಂಡಿಯ ಫಾರ್ ಐಎಎಸ್) ತಿಪಟೂರು ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಎನ್. ಚಿದಾನಂದ ಹಾಗು ಈ ಎರಡು ದಿನಗಳ ಕಾರ್ಯಕ್ರಮಗಳು ಯಶಸ್ವಿಯಾಗಲು ಮೂಲ ಕಾರಣಕರ್ತರಾದ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಜಯಪ್ರಕಾಶ್ ಗೌಡರಿಗೆ ಮತ್ತು ಅವರ ತಂಡಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ.

ಸಾವಿರಾರು ಕನ್ನಡಿಗರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅತ್ಯುತ್ತಮವಾದ ಪ್ರತಿಕ್ರಿಯೆಗಳನ್ನು ಮತ್ತು ಮೆಚ್ಚುಗೆ ನೀಡಿದ್ದಾರೆ. ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ನನ್ನ ಸೋದರ ಶ್ರೀ ಸಂತೋಷ ಜೆ, ಎರಡೂ ದಿನಗಳ ಕಾರ್ಯಕ್ರಮವನ್ನು ಭರ್ಜರಿಯಾಗಿ ಯಶಸ್ವಿಗೊಳಿಸಿ ಕನ್ನಡಿಗರ ಮನಗೆದ್ದಿದ್ದಾರೆ. ಶ್ರಮಿಸಿದ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರುಗಳಿಗೆ ಧನ್ಯವಾದಗಳು.

ಇದೇ ಅಕ್ಟೋಬರ್ 29 ಮತ್ತು 30 ರಂದು ನಡೆದ ಮಲೆನಾಡು ಸಾಂಸ್ಕೃತಿಕ ಉತ್ಸವವೂ ಸಹ ಅತ್ಯಂತ ಯಶಸ್ವಿಯಾಗಿದೆ. ಈ ಕಾರ್ಯಕ್ರಮದಲ್ಲಿ ಮಲೆನಾಡು ಪ್ರದೇಶಗಳಿಂದ ಬಂದ ಸುಮಾರು ನೂರ ಇಪ್ಪತ್ತು ಕಲಾವಿದರು ಭಾಗಿಯಾಗಿದ್ದಾರೆ. ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಅತ್ಯುತ್ತಮವಾದ ಎರಡು ನಾಟಕಗಳು–ಶಿವಮೊಗ್ಗ ರಂಗಾಯಣ ಕಲಾವಿದರಿಂದ 'ಹಕ್ಕಿ ಕಥೆ' ಮತ್ತು ಡಾ. ಸಾಸ್ವೇಹಳ್ಳಿ ಸತೀಶ್ ರಚಿಸಿ ನಿರ್ದೇಶಿಸಿದ ಹೊಂಗಿರಣ ಶಿವಮೊಗ್ಗ ತಂಡದವರಿಂದ 'ಏಸೂರು ಕೊಟ್ಟರು ಈಸೂರು ಕೊಡೆವು', ಶಿವಮೊಗ್ಗದ ಸಹಚೇತನ ನಾಟ್ಯಾಲಯ ತಂಡದ ಕಲಾವಿದೆಯರಿಂದ–ಭರತನಾಟ್ಯ ವೈವಿಧ್ಯ, ಎನ್.ಆರ್. ಪುರದ ಶ್ರೀ ಅಭಿನವ ಗಿರಿರಾಜ್ ತಂಡದವರಿಂದ–ಗೀಗೀ ಪದಗಳು ತತ್ವಪದಗಳು, ಅಂಟಿಗೆ ಪಂಟಿಗೆ, ಜಾಗೃತಿ ಗೀತೆ, ಚಿತ್ರಗೀತೆ, ಜನಪದ ಗೀತೆ ಜೊತೆಗೆ ಹಿರೇಮಗಳೂರಿನ ಡಾ. ಬಿ.ಆರ್. ಶಿವಕುಮಾರ್‌ರವರಿಂದ ಸುಗಮ ಸಂಗೀತ, ಕಡೂರಿನ ಶ್ರೀ ಮಾರುತಿ ಚಿಟ್ಟೆ ಮೇಳ ಹಾಗು ಶ್ರೀ ವೀರ ಪ್ರತಾಪ ಆಂಜನೇಯ ತಂಡದವರಿಂದ ಸೋಮನ ಕುಣಿತ, ಗ್ರಾಮೀಣ ವಾದ್ಯಗೋಷ್ಠಿ ಹೀಗೆ ಈ ಎಲ್ಲ ವೈವಿಧ್ಯಮಯ ಕಾರ್ಯಕ್ರಮಗಳು ಅತ್ಯಂತ ಸುಂದರವಾಗಿ ಮೂಡಿ ಬಂದಿವೆ. ಅಂತಿಮವಾಗಿ ಪ್ರಖ್ಯಾತ ವಾಗ್ಮಿ ಮತ್ತು ಕನ್ನಡ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಅವರು ಶ್ರೀಮತಿ ನಾಗಶ್ರೀ ತ್ಯಾಗರಾಜ್‌ರವರೊಂದಿಗೆ ನಡೆಸಿಕೊಟ್ಟ ಸಂಸಾರ–ಸಂಸ್ಕಾರ ಹರಟೆ ಕಾರ್ಯಕ್ರಮ ಕಿಕ್ಕಿರಿದಿದ್ದ ಸಭಾಂಗಣದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಮನ ಸೂರೆಗೊಂಡಿದೆ. ಒಟ್ಟಾರೆ ಪ್ರದರ್ಶನ ನೀಡಿದ ಎಲ್ಲ ಕಲಾವಿದರನ್ನು ಮತ್ತು ಕಲಾವಿದರು ದೆಹಲಿಗೆ ಬಂದು ಹೋಗಲು ಸಹಕರಿಸಿದ ಗಣ್ಯರುಗಳಾದ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದರಾದ ಮಾನ್ಯ ಶ್ರೀ ಬಿ.ವೈ. ರಾಘವೇಂದ್ರ ಕರ್ನಾಟಕ ರಾಜ್ಯದ ಗೃಹ ಸಚಿವರಾದ ಮಾನ್ಯ ಶ್ರೀ ಆರಗ ಜ್ಞಾನೇಂದ್ರ, ಕಲಾ ಪೋಷಕರು, ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳು ಹಾಗು ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ.ಎಸ್. ಈಶ್ವರಪ್ಪ ಮತ್ತು ಅವರ ಪುತ್ರರಾದ ಶ್ರೀ ಕೆ.ಈ. ಕಾಂತೇಶ್. ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ, ನಮ್ಮ ಆತ್ಮೀಯರಾದ ಕುಪ್ಪಳಿ ಕುವೆಂಪು ಪ್ರತಿಷ್ಠಾನ ಸಮ ಕಾರ್ಯದರ್ಶಿ ಶ್ರೀ ಕಡಿದಾಳ್ ಪ್ರಕಾಶ್, ನಮ್ಮ ಮಿತ್ರರಾದ ಪ್ರಗತಿಪರ ಕೃಷಿಕರು, ಜೆಡಿಎಸ್ ರಾಜ್ಯ ವಕ್ತಾರ ಶ್ರೀ ವಿನಯ್ ಕಣವೆ, ಮಿತ್ರರಾದ ಉದ್ಯಮಿ ಶ್ರೀ ವೆಂಕಟೇಶ್ ಮೂರ್ತಿ, ನಮ್ಮ ಹಿರಿಯ ಸೋದರಿ ಡಾ. ದಮಯಂತಿ ಗೌಡ ರಾವ್, ಹಿರಿಯ ಕಲಾವಿದ, ರಂಗಕರ್ಮಿ ಶ್ರೀ ಯು.ಎಸ್. ರಾಮಣ್ಣ. ವಿಶೇಷವಾಗಿ ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್‌ರವರ ಬಗ್ಗೆ ಕನ್ನಡಿಗರಿಗೆ ತಿಳಿಸಲೇಬೇಕು ಕಲಾವಿದರು ಸಂಭಾವನೆಯನ್ನು ಕೇಳುತ್ತಾರೆ. ಆದರೆ ಕಣ್ಣನ್ ಮಾಮ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಬಂದು ಹರಟೆ ಕಾರ್ಯಕ್ರಮವನ್ನು ಉಚಿತವಾಗಿ ನೀಡಿ ಸಂಘಕ್ಕೆ ದೇಣಿಗೆಯಾಗಿ ಕಿರು ಕಾಣಿಕೆ ನೀಡುವ ಮೂಲಕ ದೆಹಲಿ ಕನ್ನಡಿಗರ ಮನ ಗೆದ್ದಿದ್ದಾರೆ. ರಂಗಾಯಣ ಶಿವಮೊಗ್ಗ ನಿರ್ದೇಶಕರಾದ ಶ್ರೀ ಸಂದೇಶ್ ಜವಳಿರವರು, ಹೊಂಗಿರಣ ಶಿವಮೊಗ್ಗ ತಂಡದ ಡಾ. ಸಾಸ್ವೇಹಳ್ಳಿ ಸತೀಶ್‌ರವರು, ಆತ್ಮೀಯ ಮಿತ್ರ ಹಿರೇಮಗಳೂರಿನ ಶ್ರೀ ರೇವನಾಥ, ಎನ್.ಆರ್. ಪುರದ ಶ್ರೀ ಅಭಿನವ ಗಿರಿರಾಜ್‌ರವರು ಮತ್ತು ಸಹ ಕಲಾವಿದರು ಇನ್ನೂ ಅನೇಕ ಮಲೆನಾಡಿನ ಮಿತ್ರರೊಂದಿಗೆ ಕಾರ್ಯಕ್ರಮವು ದೆಹಲಿ ಕನ್ನಡಿಗರ ಮನವನ್ನು ಗೆದ್ದಿದೆ. ಈ ಎರಡು ದಿನಗಳ ಕಾರ್ಯಕ್ರಮಗಳಲ್ಲಿ ಸುಮಾರು 1500 ದೆಹಲಿ ಕನ್ನಡಿಗರು ಕಾರ್ಯಕ್ರಮವನ್ನು ವೀಕ್ಷಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡಿದ್ದಾರೆ. ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ನನ್ನ ಜೊತೆ ಶಿವಮೊಗ್ಗ, ಚಿಕ್ಕಮಗಳೂರು ಎಲ್ಲಾ ಭಾಗಗಳಲ್ಲಿ ಕಲಾವಿದರನ್ನು ಹುಡುಕಿ ದೆಹಲಿಗೆ ಕರೆತಂದು ಕಾರ್ಯಕ್ರಮದ ಯಶಸ್ಸಿನಲ್ಲಿ ರೂವಾರಿಯಾದ ಶ್ರಮಜೀವಿ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಹಿರಿಯ ಅಣ್ಣ ಶ್ರೀ ಕೆ.ಎಸ್. ಮೂರ್ತಿ ಅವರಿಗೆ ವಿಶೇಷವಾದ ಧನ್ಯವಾದಗಳನ್ನು ತಿಳಿಸುತ್ತೇನೆ.

ಬಂಧುಗಳೇ, ಈ ಜಿಲ್ಲಾವಾರು ಸಾಂಸ್ಕೃತಿಕ ಕಲಾ ಉತ್ಸವಗಳನ್ನು ಮಾಡುವ ಸಮಯದಲ್ಲಿ ನನ್ನ ಎರಡು ಕನಸುಗಳು ನನಸಾಗುವಂತೆ ಕಾಣುತ್ತಿವೆ. ಈ ಅಮೃತ ಮಹೋತ್ಸವ ವರ್ಷದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಇನ್ನೊಂದು ಜಾಗ ದೆಹಲಿ ಎನ್.ಸಿ.ಆರ್. ನಲ್ಲಿ ತೆಗೆದುಕೊಳ್ಳಬೇಕೆಂಬ ಕನಸು ಮತ್ತು ದೆಹಲಿಗೆ ಬರುವ ಕಲಾವಿದರಿಗೆ, ವಿದ್ಯಾರ್ಥಿಗಳಿಗೆ ಉಚಿತವಾಗಿ ದಾಸೋಹ ನೀಡಬೇಕೆಂಬ ಕನಸು ಈ ಎರಡೂ ಕನಸುಗಳು ನನಸಾಗುವ ಸಮಯ ಬರುತ್ತಿದೆ. ಈಗಾಗಲೇ ಕಲಾವಿದರಿಗೆ ಮತ್ತು ವಿದ್ಯಾರ್ಥಿಗಳಿಗೆ ಒಂದು ವರ್ಷದ ದಾಸೋಹಕ್ಕೆ ಉಚಿತವಾಗಿ ನೀಡಲು ಸಹಕಾರ ನೀಡುತ್ತೇನೆ ಎಂದು ಮಾನ್ಯ ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ. ರಾಮಕೃಷ್ಣ ಮುಂದೆ ಬಂದಿದ್ದಾರೆ.

ಬರುವ ನವೆಂಬರ್ 13 ರಂದು ಕನ್ನಡ ರಾಜ್ಯೋತ್ಸವ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವು ಸಹ ಸದಸ್ಯರ ಮನೆಗಳಿಂದ ಬಂದಂಥ ತಿಂಡಿ ತಿನಿಸುಗಳ 'ಆಹಾರ ಮೇಳ'ವು ಜರುಗಲಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿ. ಇದರ ಜೊತೆಗೆ ದೆಹಲಿ ಕನ್ನಡಿಗರ ಸದಸ್ಯರ ಮಕ್ಕಳಿಗಾಗಿ ಉದ್ಯೋಗ ಮೇಳ ಸಹ ಆಯೋಜನೆ ಮಾಡುತ್ತಿದ್ದೇವೆ. ಪ್ರಖ್ಯಾತ ಕಂಪೆನಿಗಳು ಇದರಲ್ಲಿ

## ಮುನ್ನೋಟ

ಆತ್ಮೀಯರೇ,

ನವೆಂಬರ್ ತಿಂಗಳು ದೆಹಲಿ ಕರ್ನಾಟಕ ಸಂಘದ ಕ್ಯಾಲೆಂಡರ್‌ನಲ್ಲಿ ಪ್ರಮುಖವಾದ ಭಾಗ. ಇತ್ತೀಚಿನ ವರ್ಷಗಳಲ್ಲಿ ನವೆಂಬರ್ ತಿಂಗಳು ಪೂರ್ಣವಾಗಿ ಕನ್ನಡಪರ ಚಟುವಟಿಕೆಗಳ ಕೇಂದ್ರವಾಗಿರುವ ಸಂಘ ಈ ವರ್ಷವೂ ಇದಕ್ಕೆ ಹೊರತಾಗಿಲ್ಲ. ಕೊಟ್ಟ ಮಾತಿನಂತೆ ಕನ್ನಡ ಕಲಿಕಾ ಕೇಂದ್ರ, ಸಂಗೀತ ಹಾಗೂ ನೃತ್ಯ ತರಬೇತಿ ಕಾರ್ಯಕ್ರಮಗಳು ಈ ಬಾರಿಯ ವೈಶಿಷ್ಟ್ಯ. ಇನ್ನು ದೇಶದ ಇತರೇ ಭಾಗದಲ್ಲಿ ಆಹ್ಲಾದಕರವಾದ ವಾತಾವರಣದಲ್ಲಿ ಜನರು ತಮ್ಮ ಜೀವನವನ್ನು ಆಹ್ಲಾದಿಸುತ್ತಿದ್ದರೆ, ನಾವು ದೆಹಲಿಗರು ಕಲುಷಿತ ವಾತಾವರಣದಲ್ಲಿ ತೊಂದರೆಯನ್ನನುಭವಿಸಬೇಕಾಗಿದೆ. ಆದಾಗ್ಯೂ ಮುಂದಿನ ದಿನಗಳಲ್ಲಿ ವಾತಾವರಣ ತಿಳಿಯಾಗುವುದೆಂಬ ಆಶಾ ಭಾವನೆಯೊಂದಿಗೆ, ಜೀವನದ ಸಂತೋಷ ಕ್ಷಣಗಳಿಗಾಗಿ ಕಾಯೋಣ, ಕನ್ನಡಿಗರ ಸೇವೆ ಮಾಡೋಣ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಅಧ್ಯಕ್ಷರ ನುಡಿ....

ಭಾಗವಹಿಸಲಿದ್ದಾರೆ. ನವೆಂಬರ್ ತಿಂಗಳ ಎಲ್ಲಾ ವಾರಾಂತ್ಯದಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದ್ದೇವೆ. ನವೆಂಬರ್ ಒಂದರಂದು ವಾಣಿಜ್ಯ ತೆರಿಗೆಗಳ ಇಲಾಖೆಯ ಕನ್ನಡ ಸಂಘ ಜೊತೆ ಸೇರಿ ನಮ್ಮ ಸಂಘದ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಮತ್ತು ವಿಚಾರ ಸಂಕಿರಣವನ್ನು ಆಯೋಜನೆ ಮಾಡಲಾಗಿದೆ. ಜೊತೆಗೆ ದೆಹಲಿಯಲ್ಲಿ ಕನ್ನಡ ಪರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯರಿಗೆ ಸನ್ಮಾನ ಮಾಡುವ ಮೂಲಕ ಕನ್ನಡ ಸೇವೆ ಮಾಡುವ ಗಣ್ಯರನ್ನು ಗುರುತಿಸಿ ಗೌರವಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಿರಿಯ ಐಎಎಸ್ ಅಧಿಕಾರಿಗಳಾದ ಶ್ರೀ ಅಶೋಕ್ ದಳವಾಯಿ, ವಾಣಿಜ್ಯ ತೆರಿಗೆಗಳ ಇಲಾಖೆಯ ಅಪರ ಆಯುಕ್ತರಾದ ಶ್ರೀ ಪದ್ಮಾಕರ ಆರ್. ಕುಲಕರ್ಣಿ, ಜಂಟಿ ಆಯುಕ್ತರಾದ ಶ್ರೀ ಸಂಗಮೇಶ್ ಉಪಾಸೆ, ಸಹಾಯಕ ಆಯುಕ್ತ ಶ್ರೀ ಮಹಮ್ಮದ್ ರಫೀ ಪಾಷ, ವಾಣಿಜ್ಯ ತೆರಿಗೆಗಳ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ್, ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಹಾಗು ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಮಾಮ ಅವರುಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ನವಂಬರ್ 27 ರಂದು ನಡೆಯಲಿರುವ ಕನ್ನಡ ರಾಜ್ಯೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಸ್ಥಳೀಯ ನೂರಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿ ಜಾನಪದ ಶೈಲಿಯ ನೃತ್ಯ ರೂಪಕಗಳನ್ನು ನೀಡಲಿದ್ದಾರೆ. ನೃತ್ಯ ತರಬೇತಿ ಕೊಡುವವರನ್ನು ಬೆಂಗಳೂರಿನಿಂದ ಕರೆಸಲಾಗುತ್ತಿದೆ.ಇದರಲ್ಲಿ ಭಾಗವಹಿಸುವವರು ನಮ್ಮ ಸಂಘದ ಕಚೇರಿಗೆ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಹಾಗೇನೇ, ಅವಶ್ಯಕತೆ ಅರ್ಹತೆ ಇರುವ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಸಹ ಈ ವರ್ಷ ನೀಡಲಾಗುತ್ತಿದೆ. ಈ ಬಗ್ಗೆ ಈಗಾಗಲೇ ಸದಸ್ಯರುಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಇನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರತಿ ವರ್ಷ ಕೊಡ ಮಾಡುವ ವಿಶಿಷ್ಟ ಕನ್ನಡಿಗ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ಡಾ. ಶಿವರಾಮ ಕಾರಂತ ಪ್ರಶಸ್ತಿ ಹಾಗು ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿಗಳನ್ನು ಇದೇ ನವೆಂಬರ್ ತಿಂಗಳಲ್ಲಿ ನೀಡಲಾಗುವುದು. ತಾವೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಕ್ರಿಯವಾಗಿ ಭಾಗಿಯಾಗಿ ಯಶಸ್ವಿಗೊಳಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಕ್ಕಳ ದಿನಾಚರಣೆಯ ಶುಭಾಶಯಗಳೊಂದಿಗೆ,

ವಂದನೆಗಳು.

*ಸಿ.ಎಂ. ನಾಗರಾಜ*
**ಅಧ್ಯಕ್ಷರು**

## ಅಭಿನಂದನೆ



2022ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹೊರನಾಡ ಕನ್ನಡಿಗ, ಉದ್ಯಮಿ ಶ್ರೀ ಜಯರಾಮ್ ಬನಾನ್ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆಗಳು.

## ಸಂಘದ ಮುಂಬರುವ ಕಾರ್ಯಕ್ರಮಗಳು

**ನವೆಂಬರ್ 13, 2022, ಬೆಳಿಗ್ಗೆ 11.00 ಗಂಟೆಯಿಂದ**
ಕರ್ನಾಟಕದ ವಿವಿಧ ಜಿಲ್ಲೆಗಳ 'ಕೈರುಚಿ' ಆಹಾರ ಮೇಳ ಸಂಘದ ಆವರಣದಲ್ಲಿ

**ನವೆಂಬರ್ 13, 2022, ಸಂಜೆ : 3.00 ಗಂಟೆಗೆ**–ಗೋವಾದಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಪನೋರಮಾದಲ್ಲಿ ಆಯ್ಕೆಯಾದ ಶ್ರೀ ದಿನೇಶ್ ಶೆಣೈ ಅವರ 'ಮಧ್ಯಂತರ' ಚಲನಚಿತ್ರ ಪ್ರದರ್ಶನ

**ನವೆಂಬರ್ 19, 2022, ಸಂಜೆ : 5.00 ಗಂಟೆಗೆ** – ದೆಹಲಿ ಸ್ಥಳೀಯ ಕಲಾವಿದರಿಂದ ವಿವಿಧ ಗೀತೆಗಳ ರಸಮಂಜರಿ ಕಾರ್ಯಕ್ರಮ ಮತ್ತು ಕಿರು ಸಾಕ್ಷ್ಯ ಚಿತ್ರ ಪ್ರದರ್ಶನ

**ನವೆಂಬರ್ 20, 2022 : ಸಂಜೆ 4.00 ಗಂಟೆಗೆ**–ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಗುರುಗ್ರಾಮದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

**ನವೆಂಬರ್ 27, 2022 :** ಕರ್ನಾಟಕ ರಾಜ್ಯೋತ್ಸವ ಸಮಾರೋಪ ಸಮಾರಂಭ–ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ, ಡಾ. ಶಿವರಾಮ ಕಾರಂತ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪ್ರದಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

**ಡಿಸೆಂಬರ್ 04, 2022**–ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ

**ಡಿಸೆಂಬರ್ 11 ಮತ್ತು 12, 2022**–ಉತ್ತರ ಕನ್ನಡ ಮತ್ತು ಕಿತ್ತೂರು ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವ

**ಡಿಸೆಂಬರ್ 20, 2022** –ನಾಡಪ್ರಭು ಕೆಂಪೇಗೌಡರ ಬೆಂಗಳೂರು ಹಬ್ಬ –ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ

# ದೆಹಲಿ ಕರ್ನಾಟಕ ಸಂಘದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ




ಆದಿಕವಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯ ಅಂಗವಾಗಿ 'ವಾಲ್ಮೀಕಿ ರಾಮಾಯಣದ ಸುತ್ತಮುತ್ತ' ಎನ್ನುವ ವಿಷಯ ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ದಿನಾಂಕ ಅಕ್ಟೋಬರ್ 9 ರ ಭಾನುವಾರ ಸಂಜೆ  05:00 ಗಂಟೆಗೆ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾಗಿತ್ತು. ಪ್ರೊ. ಜಯಕುಮಾರ್ ಉಪಾಧ್ಯೆ ಅವರ ಅರ್ಥಪೂರ್ಣ ವಿಚಾರ ಮಂಡನೆ ಮತ್ತು ಸ್ಥಳೀಯ ಕನ್ನಡಿಗರ ಸಂವಾದದೊಂದಿಗೆ ಯಶಸ್ವಿಯಾಗಿ ನೆರವೇರಿತು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿಚಾರ ಮಂಡನೆ ಮಾಡಿದ ಶ್ರವಣಬೆಳಗೊಳದ  ಬಾಹುಬಲಿ ಪ್ರಾಕೃತ ವಿದ್ಯಾಪೀಠದ ನಿರ್ದೇಶಕರಾದ ಪ್ರೊ.ಡಾ. ಜಯಕುಮಾರ್ ಉಪಾಧ್ಯೆ ಅವರು ಮಾತನಾಡಿ ಮರ್ಯಾದಾ ಪುರುಷೋತ್ತಮ ಶ್ರೀ ರಾಮ ಅವರದ್ದು ವಿಷ್ಣುವಿನ ಏಳನೇಯ ಅವತಾರವಾಗಿದೆ. ನಮ್ಮ ಪರಂಪರೆಯಲ್ಲಿ ದಾರ್ಶನಿಕತೆ ಮೊದಲಿಗೆ ಬರುತ್ತದೆ. ಅವುಗಳಲ್ಲಿ ಕೆಲವು ಚಿಂತನೆಗಳು ಬಹುವಾಗಿ ಕಾಡುತ್ತವೆ. ನಮ್ಮಲ್ಲಿನ ವೈದಿಕ, ಬೌದ್ಧ ಹಾಗೂ ಜೈನ ದರ್ಶನಗಳಲ್ಲಿ ಹಲವಾರು ಭಿನ್ನತೆಗಳಿವೆ. ವೈದಿಕದಲ್ಲಿ ದ್ವೈತ, ಆದ್ವೈತದಂತಹ ದರ್ಶನಗಳಿದ್ದು, ಬೌದ್ಧ ಹಾಗೂ ಜೈನ ದರ್ಶನಗಳು ಕೂಡ ತಮ್ಮದೆಯಾದ ದರ್ಶನವನ್ನು ಹೊಂದಿವೆ. ಆತ್ಮವೇ ಪರಮಾತ್ಮವೆಂದು ವೈದಿಕ ಪರಂಪರೆ ಹೇಳಿದರೆ, ಬೌದ್ಧರು ಅನಾತ್ಮವಾದಿಗಳಾಗಿದ್ದು ಆತ್ಮವನ್ನು ನಂಬದ ಪರಂಪರೆಯುನ್ನು ಅಲ್ಲಿ ಹೇಳಲಾಗಿದೆ ಮತ್ತು ಪ್ರತಿಯೊಂದು ಆತ್ಮಕ್ಕೆ ಪರಮಾತ್ಮನಾಗುವ ಶಕ್ತಿ ಇದೆಯೆಂದು ಜೈನ ದರ್ಶನ ಪರಂಪರೆಯಲ್ಲಿ ಕಂಡು ಬರುತ್ತದೆ. ತುಳಸಿದಾಸರು ಅಯೋಧ್ಯೆಯ ತುಳಸಿ ಘಾಟ್‌ನಲ್ಲಿ ರಾಮಾಯಣವನ್ನು ಬರೆದು 'ಜೈ ಸಿಯಾರಾಮ್' ಎಂದರೆ ಮೊದಲು ಸೀತಾಮಾತೆಯಾದ ಹೆಣ್ಣಿಗೆ ಗೌರವವನ್ನು ತಮ್ಮ ಕೃತಿಯ ಮೂಲಕ ನೀಡಿದ್ದಾರೆ. ಹೀಗಾಗಿ ಉತ್ತರ ಭಾರತದಲ್ಲಿ 'ಜೈ ಸಿಯಾರಾಮ್' ಎನ್ನುವ ಘೋಷಣೆ ಪ್ರತೀತಿಯಲ್ಲಿದೆ. ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ರಾಮಾಯಣ ರಚನೆಯಾಯಿತು ಎಂದು ಹೇಳಲಾಗುತ್ತದೆ. ಆದರೆ, ಪಾಣಿನಿಯು ಬರೆದ ಪ್ರಾಕೃತ ಭಾಷೆಯ ರಾಮಾಯಣವನ್ನು ನೋಡಿದರೆ ಪಾಣಿನಿಯು ಪಾಕಿಸ್ತಾನದ ಪೇಶಾವರದಲ್ಲಿ ಕ್ರಿ.ಪೂ. ಐದನೇಯ ಶತಮಾನದಲ್ಲಿದ್ದನೆಂದು ಕುರುಹು ಇದೆ. ಅದಾದ ಬಳಿಕ ಪತಂಜಲಿ ಮಹಾಕಾವ್ಯಗಳು ಬಂದವು. ಈ ಎರಡರ ಅವಧಿಯ ಮಧ್ಯೆ ವಾಲ್ಮೀಕಿಯವರು ರಾಮಾಯಣ ಮಹಾಕಾವ್ಯವನ್ನು ಬರೆದಿದ್ದಾರೆ ಆದಿಕವಿ ಎಂದು ಹೇಳುವಾಗ ಮೊದಲಿಗೆ ವಾಲ್ಮೀಕಿ ಮಹರ್ಷಿಯುವರು ಬರೆದ ರಾಮಾಯಣದಲ್ಲಿ ಮಹಾಕಾವ್ಯದ ಲಕ್ಷಣಗಳೆಲ್ಲ ಕಂಡು ಬಂದವು. ಒಂದು ಮಹಾಕಾವ್ಯಕ್ಕೆ ನಾಯಕ, ನಾಯಕಿ, ಖಳನಾಯಕರು ಬೇಕು, ಶ್ರೀರಾಮ, ಸೀತಾಮಾತೆ ಹಾಗೂ ರಾವಣನ ವ್ಯಕ್ತಿತ್ವಗಳು ಈ ಮೂರು ಪಾತ್ರಗಳನ್ನು ಮಹರ್ಷಿ ವಾಲ್ಮೀಕಿಯ ಮಹಾಕಾವ್ಯದಲ್ಲಿ ವಿವರಿಸಿ ಹೇಳಲಾಗಿದೆ ಎಂದು ಹಲವಾರು ನಿದರ್ಶನಗಳ ಮೂಲಕ ರಾಮಾಯಣ, ಶ್ರೀ ರಾಮ ಹಾಗೂ ಮಹರ್ಷಿ ವಾಲ್ಮೀಕಿಯ ಕುರಿತಾದ ಸುದೀರ್ಘವಾದ ವಿವರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಮಾತನಾಡಿ ಮಹರ್ಷಿ ವಾಲ್ಮೀಕಿ ಜಯಂತಿಯ ಶುಭಕೋರಿದರು. ದೆಹಲಿ ಕರ್ನಾಟಕ ಸಂಘವು ಆದಿಕವಿ ವಾಲ್ಮೀಕಿ ಜಯಂತಿಯ ನಿಮಿತ್ತವಾಗಿ ಇಷ್ಟು ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಕ್ಕೆ ಅಭಿನಂದನೆ ಸಲ್ಲಿಸಿ, ಬರುವ ದಿನಗಳಲ್ಲಿ ಕನ್ನಡ ಶಾಲೆಯಲ್ಲಿ ಈ ಬಗ್ಗೆ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಇನ್ನೋರ್ವ ದೆಹಲಿ ಕನ್ನಡಿಗ, ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೋ ರಂಗನಾಥ್ ಸಿಂಗಾರಿ ಅವರು ಮಾತನಾಡಿ ನಾವು ಕಥೆಯಲ್ಲಿ ಕೇಳಿರುವ ಹಾಗೆ ವಾಲ್ಮೀಕಿ ಮಹರ್ಷಿಯವರು ಪ್ರಾರಂಭದಲ್ಲಿ ಕಳ್ಳತನ ಮಾಡುತ್ತಿದ್ದು, ತದನಂತರ ಒಬ್ಬ ಮಹಾನ್ ಕವಿಯಾಗಿ, ಮಹರ್ಷಿಯಾಗಿ ಜೀವನ ರೂಪಿಸಿಗೊಂಡರು. ದೇವರು ಪ್ರತಿಯೊಬ್ಬರನ್ನು ಯಾವುದೋ ಒಂದು ಕಾರಣಕ್ಕೆ ನಮ್ಮನ್ನು ಈ ಭೂಮಿಯ ಮೇಲೆ ತಂದಿದ್ದಾನೆ. ಅದರೆ ನಮಗೆ ಆ ಕಾರಣವೇ ತಿಳಿದಿರುವುದಿಲ್ಲ. ಇದೆಲ್ಲದರ ನಡುವೆ ನಮ್ಮದೊಂದು ಸಾಧನೆ ನಿರ್ಮಾಣವಾಗುತ್ತದೆ. ಆ ಸಾಧನೆಗೆ ಎಲ್ಲರು ಕಾರಣಕರ್ತೃವಾಗಿರುತ್ತಾರೆ. ರಾಮಾಯಣದಲ್ಲಿನ ಅನೇಕ ಸನ್ನಿವೇಶಗಳಲ್ಲಿ ಒಂದಾದ ರಾವಣನ ಸಹೋದರಿ ಶೂರ್ಪನಕಿ ತನ್ನ ಪ್ರೀತಿ ಕೇಳಲು ಬಂದಾಗ ಲಕ್ಷ್ಮಣ  ಅವಳ ಮೂಗನ್ನು ಕತ್ತರಿಸುತ್ತಾನೆ, ಆ ಮೂಲಕ ರಾವಣನಿಗೆ ಕೋಪ ಬಂದು ದೊಡ್ಡ ಯುದ್ಧ ನಡೆದು ರಾಮಾಯಣಕ್ಕೆ ಕಾರಣವಾಗುತ್ತದೆ. ಇದೆಲ್ಲ ಮುಗಿದ ಬಳಿಕ ಕೊನೆಗೆ 'ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ' ಎನ್ನುವ ಮಾತು ಮಾತ್ರ ಉಳಿಯುತ್ತದೆ ಅದೇ ನಮಗೆಲ್ಲ ರಾಮಾಯಣದ ಸಂದೇಶ ಎಂದು ನಿದರ್ಶನದ ಮೂಲಕ ವಿವರಿಸಿದರು.

ಸಂವಾದದಲ್ಲಿ ಭಾಗವಹಿಸಿದ್ದ ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಚೆನ್ನು ಎಸ್. ಮಠದ, ಡಾ. ಅಶೋಕ್ ಎಂ.ಈಟಿ, ಡಾ. ವೆಂಕಟೇಶ್ ಬಿ.ಜಿ. ಹಾಗೂ ಗುರುಗ್ರಾಮ ಕನ್ನಡಿಗರಾದ ಶ್ರೀ ಚಂದ್ರಶೇಖರ್ ಜೋಳದರಾಶಿ ಮತ್ತಿತರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ಋಷಿ ಮೂಲ, ನದಿಮೂಲ ಹುಡುಕಬಾರದು ಎಂಬ ಗಾದೆಯಂತೆ ನಾವು ನಮ್ಮ ಜೀವನದಲ್ಲಿ ವ್ಯರ್ಥ ಕೆಲಸಕ್ಕೆ ಸಾಹಸ ಪಡಬಾರದು,ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ನಮ್ಮ ಸಂಸ್ಕೃತಿಯ ಉಳಿವು ಹಾಗೂ ಮುಂದುವರೆಸಿಕೊಂಡು ಹೋಗಲು ನಾವೇ ರೂಪಿಸಿಕೊಂಡ ನಿಯಮಾವಳಿಗಳಿದ್ದಂತೆ.ಏಕೆಂದರೆ ನಮ್ಮ ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕಾದ ಎಲ್ಲ ಜ್ಞಾನ ಮತ್ತು ನೈತಿಕತೆ ಈ ಗ್ರಂಥಗಳಲ್ಲಿದ್ದು ನಾವು ಅದನ್ನು ಅರಿತು ತಮ್ಮ ತಮ್ಮ ಜೀವನಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕಿದೆ. ಭೂಮಿ ಇರುವವರೆಗೂ ರಾಮಾಯಣ ವಾಲ್ಮೀಕಿಯುವರ ಹೆಸರು ಅಜರಾಮರವಾಗಿರುತ್ತದೆ. ಜಗತ್ತಿನಲ್ಲಿ ಭಾರತದ ಈ ಮಹಾಕಾವ್ಯಗಳಿಗೆ ತಮ್ಮದೇಯಾದ ಮಹತ್ವವಿದೆ. ರಾಮಾಯಣವು ಮಾನವ ಬದುಕಿನ ಅಸಂಖ್ಯ ಆಯಾಮಗಳನ್ನು ಬಿಂಬಿಸುವ ಕೃತಿಯಾಗಿದೆ. ಸಮಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ಆಯಾಮಗಳ ವಿರುದ್ಧ ವಿಶ್ಲೇಷಿಸುವ ಅಗತ್ಯವಿದೆ. ರಾಮಾಯಣವು ಹೇಳುವ ಬದುಕಿನ ಸೂತ್ರಗಳು ಜನರ ಜೀವನದೊಂದಿಗೆ ಬೆರೆತುಹೋಗಿವೆ. ರಾಮಾಯಣದಲ್ಲಿ ಗುರು ಹಿರಿಯರು ಮತ್ತು ತಂದೆ ತಾಯಿ ಸಂಬಂಧಗಳ ಮಹತ್ವದ  ಬಗ್ಗೆ ಬಹಳ ಸೂಕ್ಷ್ಮವಾಗಿ ವಿವರಿಸಲಾಗಿದೆ ಅದನ್ನು ನಾವು ಇಂದು ಅನುಸರಿಸಬೇಕಾಗಿದೆ ಎಂಬುದಾಗಿ ಅಭಿಪ್ರಾಯವನ್ನು ಅವರುಗಳು ವ್ಯಕ್ತ ಪಡಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಅನುಪಸ್ಥಿತಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಇವತ್ತಿನ ಕಾರ್ಯಕ್ರಮವು ಬಹಳ ಅದ್ದೂರಿಯಾಗಿ ಮೂಡಿ ಬಂದಿತು, ಪ್ರೊ. ಜಯಕುಮಾರ್ ಉಪಾಧ್ಯೆ ಅವರು ಬಹಳ ಸ್ಪಷ್ಟವಾಗಿ ನಮಗೆ ರಾಮಾಯಣದ ಅನೇಕ

ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ರಾಮಾಯಣದ ಬಗೆಗೆ ನಾವು ಈಗಾಗಲೇ ಸಾಕಷ್ಟು ಕಲಿತಿದ್ದು, ಇಂತಹ ಚರ್ಚೆಗಳು ಇನ್ನೂ ನಡೆಯಬೇಕಾಗಿದೆ ಎಂದು ಹೇಳಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಸುಮಾರು ಮೂರು ಗಂಟೆಗಳ ಕಾಲ ಆಸಕ್ತ ದೆಹಲಿ ಕನ್ನಡಿಗರ ಅರ್ಥಪೂರ್ಣ ಚರ್ಚೆಗಳೊಂದಿಗೆ ಜರುಗಿದ ಕಾರ್ಯಕ್ರಮವು ಸುಂದರವಾಗಿ ಮೂಡಿಬಂದಿತು. ಫೇಸ್‌ಬುಕ್ ನೇರಪ್ರಸಾರದ ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಲು ಅವಕಾಶ ಮಾಡಿಕೊಡಲಾಗಿತ್ತು ಹಾಗಾಗಿ ನೂರಾರು ಕನ್ನಡಿಗರು ಆನಲೈನ್ ಮೂಲಕ ವೀಕ್ಷಿಸಿರುವುದು ಹೆಮ್ಮೆಯ ಸಂಗತಿ. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಗಾಯಕಿ ಹಾಗೂ ಗಮಕ ಕಲಾವಿದೆ ಶ್ರೀಮತಿ ಶಾಂತಲಾ ಕಿರಣ್ ಅವರು ರಾಮಾಯಣ ಕಾವ್ಯದ ಪ್ರಾರ್ಥನಾ ಶ್ಲೋಕಗಳನ್ನು ಹಾಡಿ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರು ಪ್ರೊ. ಜಯಕುಮಾರ್ ಉಪಾಧ್ಯೆ ಅವರ ಪರಿಚಯ ಮಾಡಿಕೊಟ್ಟರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಶ್ರೀ ಎನ್.ಪಿ. ಚಂದ್ರಶೇಖರ ಅವರು ವಂದನಾರ್ಪಣೆ ನಡೆಸಿಕೊಟ್ಟರು.

**ಅಭಿಮತ ವರದಿ**

# ದೆಹಲಿ ಕರ್ನಾಟಕ ಸಂಘದಲ್ಲಿ ಅದ್ದೂರಿಯಾಗಿ ನೆರವೇರಿದ
# ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವ




ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಅಕ್ಟೋಬರ್ 15 ಶನಿವಾರ ಮತ್ತು 16 ಭಾನುವಾರದಂದು ಆಯೋಜಿಸಿದ್ದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವದಲ್ಲಿ ಈ ಮೂರು ಜಿಲ್ಲೆಗಳಿಂದ ಬಂದಿದ್ದ ನೂರ ಇವತ್ತಕ್ಕೂ ಹೆಚ್ಚು ಕಲಾವಿದರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಆಚರಣೆ ಅರ್ಥಪೂರ್ಣವಾಗಿ ನೆರವೇರಿತು.

ಮಂಡ್ಯದ ಸದ್ವಿದ್ಯಾ ಶಾಲಾ ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆಗಳ ನೃತ್ಯ ಹಾಡುಗಳು, ವಿವೇಕ ವಿದ್ಯಾ ಸಂಸ್ಥೆ ಹನಕೆರೆ ಮಂಡ್ಯ ಕಲಾವಿದರಿಂದ ಮೂಡಲಪಾಯ ಯಕ್ಷಗಾನ 'ದೇವಿ ಮಹಾತ್ಮೆ', ಕೈಲಾಸ ಕಲಾಧಾರ ಕಲ್ಚರಲ್ ಚಾರಿಟೇಬಲ್ ಟ್ರಸ್ಟ್ ತುಮಕೂರು ಕಲಾವಿದರಿಂದ ನವರಸದಲ್ಲಿ ದೇವರ ನಾಮ ನೃತ್ಯರೂಪಕ, ಹಾಸನದ ಸುಪ್ರದಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯ ಕಲಾವಿದರಿಂದ ಗಾಯನ ಹಾಗೂ ಸುಗಮ ಸಂಗೀತ, ಮಂಡ್ಯದ ಕರ್ನಾಟಕ ಸಂಘದ ವತಿಯಿಂದ ಸದ್ವಿದ್ಯಾ ರಂಗ ತಂಡದ ಕಲಾವಿದರಿಂದ ಕುವೆಂಪು ವಿರಚಿತ ಹಳೆಗನ್ನಡ ನಾಟಕ 'ಸ್ಮಶಾನ ಕುರುಕ್ಷೇತ್ರಂ' ಹಾಗು ಹಾಸನದ ನಾಟ್ಯಕಲಾ ನಿವಾಸ್ ಕಲಾವಿದರಿಂದ ಭರತನಾಟ್ಯ ವೈವಿಧ್ಯ ನೃತ್ಯ ಹೀಗೆ ಅನೇಕ ವಿವಿಧ ಕಲಾವಿದರನ್ನು ಒಳಗೊಂಡ ಈ ಕಾರ್ಯಕ್ರಮಗಳಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರು ಎರಡು ದಿನಗಳ ಕಾಲ ಸಂತೋಷದಿಂದ ಕಾರ್ಯಕ್ರಮ ನೋಡಿ ಆನಂದಿಸಿದರು.

ಅಕ್ಟೋಬರ್ 15 ರ ಶನಿವಾರ ಸಂಜೆ 06:00 ಗಂಟೆಗೆ ಉದ್ಘಾಟನೆಗೊಂಡ ಕಾರ್ಯಕ್ರಮದಲ್ಲಿ ಮೂರು ಜಿಲ್ಲೆಗಳ ವಿವಿಧ ಕ್ಷೇತ್ರಗಳ ಗಣ್ಯರು ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ದೆಹಲಿ ಕರ್ನಾಟಕ ಸಂಘವು ಸ್ಥಾಪನೆಯಾಗಿ 75 ವರ್ಷವಾಗಿರುವುದಕ್ಕೆ ಮತ್ತು ಇದರ ಬೆಳವಣಿಗೆಗೆ ಕಾರಣಕರ್ತರಾದ ಎಲ್ಲ ಹಿರಿಯರಿಗೆ ಅಭಿನಂದನೆ ತಿಳಿಸಿದರು. ಕಾಕತಾಳೀಯವೆಂಬಂತೆ ಮಂಡ್ಯ ಕರ್ನಾಟಕ ಸಂಘಕ್ಕೂ ಸಹ 75 ವರ್ಷಗಳು ತುಂಬಿವೆ ಹಾಗು ತನ್ನ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ನಾಡಿನಲ್ಲಿ ಮಠಗಳ ಹೊರತಾಗಿ ಮಂಡ್ಯ ಕರ್ನಾಟಕ ಸಂಘ ನಿರಂತರ ಅನ್ನದಾನ ಮಾಡುತ್ತಿರುವ ನಾಡಿನ ಏಕೈಕ ಸಂಘವಾಗಿದೆ. ಮಾನ್ಯ ಶ್ರೀ ಹೆಚ್.ಡಿ. ದೇವೆಗೌಡರು ನಮ್ಮ ಕನ್ನಡ ನೆಲದ ಏಕೈಕ ಪ್ರಧಾನಿಗಳಾಗಿದ್ದಾರೆ. ಅಂತಹ ನಾಯಕರು ಬಂದ ನೆಲ ಹಾಸನವಾಗಿದೆ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಕನಸಾಗಿರುವ ಮತ್ತೊಂದು ಸಮುಚ್ಚಯ ಕಟ್ಟಲು ದೆಹಲಿಗೆ ಹೊಂದಿಕೊಂಡಿರುವ ಉತ್ತರ ಪ್ರದೇಶ ರಾಜ್ಯದ ನೋಯ್ಡಾದಲ್ಲಿ ಸಂಘಕ್ಕೆ ಒಂದು ನಿವೇಶನ ದೊರಕಿಸುವಂತೆ ಮನವಿ ಮಾಡಿಕೊಂಡಿದ್ದು, ಆದಿಚುಂಚನಗಿರಿಯ ಪೀಠಾಧಿಪತಿಗಳಾದ ಶ್ರೀ ಡಾ. ನಿರ್ಮಲಾನಂದ ಸ್ವಾಮೀಜಿಯವರು ಈ ಸಲುವಾಗಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್ ಅವರೊಂದಿಗೆ ಮಾತನಾಡುವುದಾಗಿ ಮತ್ತು ಅದಕ್ಕೆ ಸೂಕ್ತವಾದ ಜಾಗವನ್ನು ಕೊಡಿಸುವುದಾಗಿಯೂ ಭರವಸೆ ನೀಡಿದ್ದಾರೆ. ಜೊತೆಗೆ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಮತ್ತೊಂದು ಕನಸಾಗಿರುವ ದೆಹಲಿಗೆ ಐಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗೆ ಓದಲು ಮತ್ತು ತರಬೇತಿಗೆ ಬರುವ ಕನ್ನಡಿಗರಿಗೆ ವಸತಿ, ಅನ್ನದಾನ ಹಾಗೂ ಗ್ರಂಥಾಲಯವನ್ನು ಸ್ಥಾಪಿಸುವ ಕನಸು ನನಸಾಗಲೆಂದು ಆಶಿಸಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿದ್ದ ವಿಧಾನ ಪರಿಷತ್ ಮಾಜಿ ಸದಸ್ಯರಾದ ಶ್ರೀ ಬಿ. ರಾಮಕೃಷ್ಣ ಅವರು ಮಾತನಾಡಿ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರಿಗೆ ಎಲ್ಲಾ ಕನ್ನಡಿಗರನ್ನು ದೆಹಲಿಗೆ ಕರೆತಂದು ಒಂದು ಕಡೆ ಸೇರಿಸುವ ಶಕ್ತಿಯನ್ನು ದೇವರು ಕೊಟ್ಟಿದ್ದಾರೆ. ಕನ್ನಡ ನಾಡಿನಲ್ಲಿ ಹಲವಾರು ಪ್ರಮುಖ ಸಂಘಗಳಿವೆ. ಆದರೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯದ ನಡುವೆ ಪರಸ್ಪರ ಸಂಬಂಧದ ಸೇತುವೆ ಕಟ್ಟುವ ಶಕ್ತಿ ಕರ್ನಾಟಕ ಸಂಘಕ್ಕಿದೆ. ಇಂತಹ

ಕೆಲಸ ಮಾಡುತ್ತಿರುವ ಎಲ್ಲ ಕನ್ನಡ ಸೇವಾಕಾಂಕ್ಷಿಗಳನ್ನು ಈ ವೇಳೆಯಲ್ಲಿ ಹರಸಿದರು. ಇದರ ಜೊತೆಗೆ ದೆಹಲಿಗೆ ಬರುವ ಎಲ್ಲ ಕನ್ನಡಿಗರಿಗೆ ಅನುಕೂಲವಾಗಲು ದೆಹಲಿ ಕರ್ನಾಟಕ ಸಂಘವು ಅನ್ನದಾನ ಮಾಡಬೇಕು ಅದಕ್ಕೆ ತಾವು ಪೂರ್ಣ ಹಣಕಾಸಿನ ಸಹಕಾರ ನೀಡುವುದಾಗಿ ಮಾನ್ಯ ಶ್ರೀ ಬಿ. ರಾಮಕೃಷ್ಣ ಅವರು ಘೋಷಿಸಿದರು.

ಮುಖ್ಯ ಅತಿಥಿಗಳಾಗಿದ್ದ ಇನ್ನೋರ್ವ ಗಣ್ಯರು, ಕಲೆ ಮತ್ತು ಸಂಸ್ಕೃತಿಯ ಪೋಷಕರು ಹಾಗೂ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಂ. ಶ್ರೀನಿವಾಸ್ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಮೃತ ಮಹೋತ್ಸವವು ಸಮಕಾಲೀನದಲ್ಲಿ ನಡೆಯುತ್ತಿದೆ. ದೆಹಲಿ ಕರ್ನಾಟಕ ಸಂಘದ ಹಾಗೇ ಮಂಡ್ಯದಲ್ಲಿಯೂ ಸಹ ಕರ್ನಾಟಕ ಸಂಘದ ಸಭಾಂಗಣ / ರಂಗಮಂದಿರವನ್ನು ನಿರ್ಮಿಸಬೇಕಿದೆ ಇದಕ್ಕಾಗಿ ಸರ್ಕಾರವನ್ನು ವಿನಂತಿಸಿಕೊಳ್ಳಲಾಗುವುದು ಎಂದು ಹೇಳಿ, ಕಾರ್ಯಕ್ರಮ ಮುಗಿಯುವವರೆಗೂ ಸ್ಫೂರ್ತಿಯಿಂದ ಉಪಸ್ಥಿತರಿದ್ದು ತಮ್ಮ ಉತ್ಸಾಹವನ್ನು ವ್ಯಕ್ತ ಪಡಿಸಿದರು.

ಮುಖ್ಯ ಅತಿಥಿಗಳಾಗಿದ್ದ ಇನ್ನೋರ್ವ ಗಣ್ಯರು ಹಾಗೂ ಕರ್ನಾಟಕದ ಹಿರಿಯ ಐಪಿಎಸ್ ಅಧಿಕಾರಿ ಡಾ. ಬಿ.ಆರ್. ರವಿಕಾಂತೇ ಗೌಡ, ಐಪಿಎಸ್ (ಜಂಟಿ ಪೊಲೀಸ್ ಆಯುಕ್ತರು–ಸಂಚಾರ, ಬೆಂಗಳೂರು) ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಹಾಗೂ ಮಂಡ್ಯ ಕರ್ನಾಟಕ ಸಂಘಗಳ ಏಕಕಾಲೀಕ 75ರ ಅಮೃತ ಮಹೋತ್ಸವ ತಮಗೆ ಕಾಕತಾಳೀಯವಲ್ಲ ವೆನಿಸುತ್ತದೆ ಏಕೆಂದರೆ ಅವುಗಳಿಗೊಂದಕ್ಕೊಂದು ಸಂಬಂಧವಿದೆ. ಕರ್ನಾಟಕದಲ್ಲಿ ಶೇಕಡಾವಾರು ಹೆಚ್ಚು ಕನ್ನಡ ಭಾಷೆ ಮಾತನಾಡುವ ಮೊದಲ ಜಿಲ್ಲೆ ಮಂಡ್ಯ, ಆದಾದಮೇಲೆ ಹಾಸನ ಮತ್ತು ತುಮಕೂರು ಜಿಲ್ಲೆಗಳು. ಹೀಗೆ ಕನ್ನಡ ಭಾಷೆಯ ಮೇಲಿನ ಅಭಿಮಾನವು ಈ ಜಿಲ್ಲೆಗಳಲ್ಲಿ ಅಪಾರವಾಗಿದೆ. ಕುವೆಂಪುರವರು ಹೇಳಿದಂತೆ ಎಲ್ಲಾದರು ಇರು, ಎಂತಾದರೂ ಇರು, ಎಂದೆದಿಗೂ ನೀ ಕನ್ನಡವಾಗಿರು ಎಂಬಂತೆ ದೆಹಲಿ ಕನ್ನಡಿಗರು ಹೊರನಾಡಲ್ಲಿದ್ದರೂ, ನಮ್ಮ ನೆಲೆ ಕನ್ನಡವೆಂದು, ನಮ್ಮ ಕನ್ನಡವನ್ನು ಇಲ್ಲಿನ ಸಂಘದಲ್ಲಿ ಜೀವಂತವಿರಿಸಿದ್ದಾರೆ. ಒಂದು ಸಂಘಟನೆಯನ್ನು 75 ವರ್ಷಗಳ ಕಾಲ ಬೆಳೆಸುವುದು ಬಹಳ ಕಷ್ಟದ ಕೆಲಸ, ಅಷ್ಟು ಸವಾಲುಗಳೊಂದಿಗೆ ಇಷ್ಟು ದೊಡ್ಡ ಮಟ್ಟಿಗೆ ಹಿರಿಯರು ಕಟ್ಟಿ ಬೆಳೆಸಿದ ಈ ಸಂಘಕ್ಕೆ ಈಗ ಅಧ್ಯಕ್ಷರಾಗಿರುವ ಶ್ರೀ ಸಿ.ಎಂ. ನಾಗರಾಜ ಅವರು ಮತ್ತಷ್ಟು ಶ್ರಮವಹಿಸಿ ಶಕ್ತಿ ತುಂಬುತ್ತಿದ್ದಾರೆ ಎಂದರು. ಕಾರ್ಯಕ್ರಮದ ಕೊನೆಯವರೆಗೂ ಭಾಗವಹಿಸಿದ್ದ ಹಿರಿಯ ಐಪಿಎಸ್ ಅಧಿಕಾರಿಗಳಾದ ಡಾ. ಬಿ.ಆರ್. ರವಿಕಾಂತೇಗೌಡರು ಸಂಘದ ಕಾರ್ಯಕ್ರಮ ಹಾಗೂ ಚಟುವಟಿಕೆಗಳನ್ನು ನೋಡಿ ಮನತುಂಬಿ ಹರಸಿದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು. ಕಾರ್ಯಕ್ರಮದ ನಂತರ 'ದೇವಿ ಮಹಾತ್ಮೆ' ಮೂಡಲಪಾಯ ಯಕ್ಷಗಾನವನ್ನು ಮಂಡ್ಯದ ಹನಕೆರೆ ವಿವೇಕ ವಿದ್ಯಾ ಸಂಸ್ಥೆಯ ವಿದ್ಯಾರ್ಥಿ ಕಲಾವಿದರು ಅತ್ಯುತ್ತಮವಾಗಿ ಪ್ರದರ್ಶಿಸಿದರು. ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ್ ಜೆ ಅಚ್ಚುಕಟ್ಟಾಗಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಗಣ್ಯರನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾರಾವ್ ಸ್ವಾಗತಿಸಿದರು. ಸಂಘದ ಮುಖವಾಣಿ ಅಭಿಮತ ಮಾಸ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಚಂದ್ರಶೇಖರ ಎನ್.ಪಿ. ವಂದನಾರ್ಪಣೆ ಅರ್ಪಿಸಿದರು.

**ಸಮಾರೋಪ ಸಮಾರಂಭ:** ಅಪಾರ ಸಂಖ್ಯೆಯಲ್ಲಿ ಸಭಾಂಗಣದಲ್ಲಿ ಉಪಸ್ತಿತರಿದ್ದ ದೆಹಲಿ ಎನ್.ಸಿ.ಆರ್.ನ ಕನ್ನಡಿಗರು ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾದರು. ಕಾರ್ಯಕ್ರಮದ ಕೊನೆಯ ದಿನವಾದ ಅಕ್ಟೋಬರ್ 16 ರ ಭಾನುವಾರ ಸಂಜೆ ಸಮಾರೋಪ ಸಮಾರಂಭ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಮಾಜಿ ಸಚಿವರೂ, ಸಂಸದರಾದ ಶ್ರೀ ಎನ್. ಚೆಲುವರಾಯಸ್ವಾಮಿ ಅವರು ಮಾತನಾಡಿ, ದೆಹಲಿ ಕರ್ನಾಟಕ ಸಂಘವು ಅತಿ ಹೆಚ್ಚಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವುದರಲ್ಲಿ ಎಲ್ಲಾ ಕನ್ನಡ ಸಂಘಗಳಿಗಿಂತ ಮುಂದಿದೆ. ರಾಷ್ಟ್ರ ರಾಜಧಾನಿಯಲ್ಲಿರುವ ದೆಹಲಿ ಕರ್ನಾಟಕ ಸಂಘದ ವೇದಿಕೆಯು ಕರುನಾಡಿನ ಅನೇಕ ಕಲಾವಿದರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಅವಕಾಶ ನೀಡುತ್ತಾ ಬರುತ್ತಿದೆ. ಇದರ ರಾಯಭಾರಿಯಾಗಿ ಕೆಲಸ ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಸಂಘದ ಎಲ್ಲ ಪದಾಧಿಕಾರಿಗಳ ಶ್ರಮ ಮತ್ತು ಸಹಕಾರದಿಂದ ಈ ಕಾರ್ಯ ಸಾಧ್ಯವಾಗುತ್ತಿದೆ. ಈ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸದಾ ನಡೆಯುತ್ತಿರಲಿ ನಿಮ್ಮೊಂದಿಗೆ ನಾವು ಸಹ ಇರುವೆವು ಎಂದು ತಿಳಿಸಿದರು. ಅಮೃತ ಮಹೋತ್ಸವದ ಸಂಭ್ರಮಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗುತ್ತಿರುವ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಯಲ್ಲಿಯೇ ದೆಹಲಿಯಲ್ಲಿ ಶಾಶ್ವತವಾಗಿ ಉಳಿಯುವಂತಹ ಕಾರ್ಯಗಳನ್ನು ಮಾಡಲು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಕೈ ಹಾಕುತ್ತಿರುವುದು ನಮಗೆಲ್ಲರಿಗೂ ಸಂತೋಷ ತಂದಿದೆ. ದೆಹಲಿಯಲ್ಲಿ ಐಎಎಸ್ ಪರೀಕ್ಷೆಗೆ ಕೋಚಿಂಗ್ ಪಡೆಯಲು ಬರುವ ಎಲ್ಲ ಬಡ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಮಾಡುವ ಉತ್ತಮ ಕಾರ್ಯಕ್ಕೆ ನಮ್ಮನ್ನು ಹೆಚ್ಚಾಗಿ ಬಳಸಿಕೊಳ್ಳಿ ಇಂತಹ ಒಳ್ಳೆಯ ಕೆಲಸಗಳು ನಿಲ್ಲದಿರಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾದ ಐ.ಆರ್.ಎಸ್. ಅಧಿಕಾರಿ ಶ್ರೀ ಜಯರಾಮ್ ರಾಯ್‌ಪುರ ಅವರು ಮಾತನಾಡಿ ನಮ್ಮ ನಾಡಿನಲ್ಲಿ ಸಾಂಸ್ಕೃತಿಕ ನಾಯಕರ ಕೊರತೆಯಿದೆ ಎಂದು ನಾನು ತಿಳಿದಿದ್ದೆ ಆದರೆ ಶ್ರೀ ಸಿ.ಎಂ. ನಾಗರಾಜ ಅವರ ಕೆಲಸವನ್ನು ನೋಡಿದ ಮೇಲೆ ನಮ್ಮಲ್ಲಿ ಹಲವಾರು ಜನ ಸಾಂಸ್ಕೃತಿಕ ನಾಯಕರು ಹೊರಹೊಮ್ಮುತ್ತಿದ್ದಾರೆ, ದೆಹಲಿಯಂತಹ ರಾಷ್ಟ್ರ ಮಟ್ಟದಲ್ಲಿ ಇನ್ನಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೊಡುವ ಕೆಲಸ ಅವರಿಂದ ಆಗಲಿ ಎಂದು ಹರಸಿದರು. ದೆಹಲಿ ಹಾಗೂ ಮಂಡ್ಯ ಕರ್ನಾಟಕ ಸಂಘಗಳು 75 ವರ್ಷದ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅದರ ಅಧ್ಯಕ್ಷರುಗಳಾದ ಶ್ರೀ ಸಿ.ಎಂ. ನಾಗರಾಜ ಹಾಗು ಪ್ರೊ ಜಯಪ್ರಕಾಶ್ ಗೌಡ್ರು ಇವುಗಳನ್ನು ಅತಿ ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಎಲ್ಲರಿಗೂ ರಾಜಕೀಯ ನಾಯಕರಾಗಲು ಸಾಧ್ಯವಿಲ್ಲ ಆದರೆ ಸಾಂಸ್ಕೃತಿಕ ನಾಯಕರಾಗಬಹುದು, ಇವರಿಗೆ ನಾವು ಹೆಗಲು ನೀಡುವ ಅವಶ್ಯವಿದೆ ಎಂದು ಕರ್ನಾಟಕ ಸಂಘದಲ್ಲಿ ನಡೆದ ಕಾರ್ಯಕ್ರಮವನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ಇದೇ ಸಂಧರ್ಭದಲ್ಲಿ ಉಪಸ್ಥಿತರಿದ್ದ, ಐದು ರೂಪಾಯಿಗೆ ಚಿಕಿತ್ಸೆ ನೀಡುವ ಐದು ರೂಪಾಯಿ ಡಾಕ್ಟರ್ ಎಂದೇ ನಾಡಿನಾದ್ಯಂತ ಪ್ರಖ್ಯಾತಿ ಪಡೆದಿರುವ ಹಾಗೂ CNN-News18 Indian of the Year 2022 ಪ್ರಶಸ್ತಿ ಪುರಸ್ಕೃತರಾಗಿರುವ ಮಂಡ್ಯದ ಚರ್ಮ ರೋಗ ತಜ್ಞ ವೈದ್ಯ ರಾದ ಡಾ. ಶಂಕರೇ ಗೌಡರು ಮಾತನಾಡಿ ಹಣ ಸಂಪಾದನೆಗಿಂತ ನಮ್ಮ ಓದಿನ ಜ್ಞಾನ ಹರಡುವುದರಲ್ಲಿ ನಾವು ನಿರತರಾಗಬೇಕು. ಇದು ನನಗೆ ಆತ್ಮ ತೃಪ್ತಿಯನ್ನು ತಂದುಕೊಟ್ಟಿದೆ ಎಂದು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಹೇಳಿದ್ದಂತೆ ದೆಹಲಿ ಕರ್ನಾಟಕ ಸಂಘದಲ್ಲಿ ಅನ್ನದಾನ ಸೇವೆ ಮಾಡಲು ಒಂದು ವರ್ಷದ ಕಾಲ ಅದಕ್ಕೆ ಬೇಕಾದ ಆರ್ಥಿಕ ನೆರವು ನೀಡಲು ಮುಂದೆ ಬಂದಿರುವ ಕೊಡುಗೈ



ದಾನಿಗಳಾದ ಮಾನ್ಯ ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಬಿ. ರಾಮಕೃಷ್ಣ ಅವರ ಕಾರ್ಯವನ್ನು ಶ್ಲಾಘಿಸುತ್ತಾ ಕೃತಜ್ಞತೆ ಅರ್ಪಿಸಿದರು. ದೆಹಲಿ ಕರ್ನಾಟಕ ಸಂಘವು ಸಹ ಕರ್ನಾಟಕದಿಂದ ದೆಹಲಿಗೆ ಐಎಎಸ್ ಓದಲು ಬರುವ ಮಕ್ಕಳಿಗೆ ವಸತಿ, ಊಟ ಹಾಗೂ ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನೂ ಮಾಡುತ್ತಿದೆ. ಇದಕ್ಕೆ ಎಲ್ಲರ ಸಹಕಾರ ಬೇಕಾಗಿದೆ ಎಂದು ವಿನಂತಿಸಿದರು. ಮುಂದೆ 2023ರ ಫೆಬ್ರವರಿ ತಿಂಗಳಿನಲ್ಲಿ ಆಯೋಜಿಸಲಾಗಲಿರುವ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಸಮಾರೋಪ ಸಮಾರಂಭ ಕಾರ್ಯಕ್ರಮವು ದೆಹಲಿಯ ತಾಲಕಟೋರಾ ಸ್ಟೇಡಿಯಂನಲ್ಲಿ ನಡೆಯಲಿದ್ದು, ಇದಕ್ಕಾಗಿ ಕರ್ನಾಟಕದಿಂದ ಒಂದು ಸಾವಿರ ಕಲಾವಿದರನ್ನು ಕರೆತಂದು ದೇಶದ ಹೆಮ್ಮೆಯ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಅತೀ ದೊಡ್ಡ ಕಾರ್ಯಕ್ರಮವನ್ನು ನೀಡುವ ತಯಾರಿ ನಡೆಯುತ್ತಿದೆ, ಜೊತೆಗೆ 75 ವರ್ಷಗಳ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸಂಘವು ಈ ಸಂದರ್ಭದಲ್ಲಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಇದಕ್ಕಾಗಿ ದೆಹಲಿ ಕನ್ನಡಿಗರು, ಸರ್ಕಾರ, ರಾಜಕೀಯ ನಾಯಕರು ಸಹಕಾರ ನೀಡಬೇಕೆಂದು ಕಾರ್ಯಕ್ರಮದ ಯಶಸ್ಸಿನಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದರು. ಈ ಎರಡೂ ದಿನಗಳ ಕಾರ್ಯಕ್ರಮಗಳು ಇಷ್ಟೊಂದು ಯಶಸ್ವಿಯಾಗಲು ಕಾರಣಕರ್ತರಾದ ಎಲ್ಲಾ ಗಣ್ಯರಿಗೆ ಸಮಸ್ತ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡಿಗರ ಪರವಾಗಿ ವಂದಿಸಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಜಯಪ್ರಕಾಶ್ ಗೌಡರು ಮಾತನಾಡಿ ಇವತ್ತಿನ ಸುಂದರ ಕಾರ್ಯಕ್ರಮದಲ್ಲಿ ದೆಹಲಿ ಮತ್ತು ಮಂಡ್ಯ ಕರ್ನಾಟಕ ಸಂಘಗಳು ಏಕಕಾಲದಲ್ಲಿ ಅಮೃತ ಮಹೋತ್ಸವ ಕಾರ್ಯಕ್ರಮಗಳನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಕಲೆ, ಸಾಹಿತ್ಯದ ಮೂಲಕ ಸಾಂಸ್ಕೃತಿಕ ಮನರಂಜನೆಯನ್ನು ನೀಡುತ್ತಿರುವ ಕಲಾ ತಂಡಗಳಿಗೆ ಅಭಿನಂದನೆ ತಿಳಿಸಿದರು. ತಾವು ಚುನಾವಣೆಯಲ್ಲಿ ಗೆದ್ದು ಬಂದ ಬಳಿಕ ಶ್ರೀ ನಾಗರಾಜರು ನೊಯ್ಡಾದಲ್ಲಿ ದೆಹಲಿ ಕರ್ನಾಟಕ ಸಂಘದ ಇನ್ನೊಂದು ಶಾಖಾ ಕಟ್ಟಡವನ್ನು ಸಂಘವು ನಿರ್ಮಿಸುವ ಕುರಿತಾಗಿ ಆದಿಚುಂಚನಗಿರಿಮಠದ ಶ್ರೀ ಡಾ. ನಿರ್ಮಲಾನಂದ ಸ್ವಾಮೀಜಿಯವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್ ಅವರಿಗೆ ವಿನಂತಿ ಮಾಡಿದ್ದು ಅದಕ್ಕೆ ಸ್ಪಂದಿಸುವ ಭರವಸೆ ನೀಡಿದ್ದಾರೆ. ಅವರ ಇನ್ನೊಂದು ಕನಸಾಗಿರುವ ಐಎಎಸ್ ಓದಲು ದೆಹಲಿಗೆ ಬರುವ ಮಕ್ಕಳಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡುವ ಯೋಜನೆಗಳಿಗೆ ಸರ್ಕಾರ ಮತ್ತು ಎಲ್ಲರ ಸಹಕಾರ ಬೇಕಾಗಿದೆ ಎಂದು ವಿನಂತಿಸಿಕೊಂಡರು. ಇವತ್ತಿನ ಕಾರ್ಯಕ್ರಮಕ್ಕೆ ಮಂಡ್ಯದ ನಾಯಕರುಗಳು, ಸಮಾಜ ಸೇವಕರು ಹಾಗೂ ಇನ್ನಿತರ ಕನ್ನಡಾಸಕ್ತರು, ಕಲಾ ತಂಡಗಳಿಗೆ ದೆಹಲಿಗೆ ಬಂದು ಹೋಗುವ ಎಲ್ಲ ಸಹಕಾರ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ ಎಂದು ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಹಾಸನದ ಶ್ರೀ ನಾಗ್ ಗ್ರೂಪಿನ ಮಾಲೀಕರಾದ ಈ ಶ್ರೀ ನಾಗರಾಜ್ ಎಸ್.ಜಿ., ಕೆನರಾ ಬ್ಯಾಂಕ್‌ನ ನಿವೃತ್ತ ಜನರಲ್ ಮ್ಯಾನೇಜರ್ ಡಾ. ಎಸ್.ಟಿ. ರಾಮಚಂದ್ರ, ಇಂಡಿಯ ಫಾರ್ ಐಎಎಸ್ ಅಕಾಡೆಮಿಯ ಸಹ ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀ ಪಿ.ಸಿ. ಶ್ರೀನಿವಾಸ್, ಶ್ರೀ ಶಿವು, ಮಾಲೀಕರು ಪೂರ್ಣಿಮಾ ಪ್ಯಾಲೇಸ್ ಮಂಡ್ಯ ಐದು ರೂಪಾಯಿ ಡಾ. ಶಂಕರೇ ಗೌಡ, ಮಂಡ್ಯ ಸೇರಿದಂತೆ ಇನ್ನು ಅನೇಕ ಗಣ್ಯರುಗಳನ್ನು ಮತ್ತು ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸಂತೋಷ್ ಜೆ. ಹಾಗೂ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಮಿತಾ ಮುರುಗೋಡ ಅವರು ನಿರೂಪಣೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರು ನಾಟ್ಯಕಲಾ ನಿವಾಸ್ ಕಲಾ ಶಾಲೆಯ ಭರತ ನಾಟ್ಯ ಕಲಾವಿದರ ಪರಿಚಯ ಮಾಡಿಕೊಟ್ಟರು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ವಂದನಾರ್ಪಣೆ ಅರ್ಪಿಸಿದರು. ಕಿಕ್ಕಿರಿದು ತುಂಬಿದ್ದ ಸಂಘದ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವದ ಎಲ್ಲಾ ಕಾರ್ಯಕ್ರಮಗಳನ್ನು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ವೀಕ್ಷಿಸಿದ ದೆಹಲಿ ಎನ್.ಸಿ.ಆರ್. ನ ಕನ್ನಡಿಗರು ತಮ್ಮ ಹರ್ಷ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

**ಯಲ್ಲಾಲಿಂಗ ಕೊಪ್ಪದ**

## ಸಿ.ಎನ್.ಎನ್. ನ್ಯೂಸ್ 18 ನಿಂದ 2022 ರ ವರ್ಷದ ಭಾರತೀಯ ಪ್ರಶಸ್ತಿ ಪುರಸ್ಕೃತ ಐದು ರೂಪಾಯಿ ಡಾಕ್ಟರ್ ಖ್ಯಾತಿಯ

# ಡಾ. ಶಂಕರೇ ಗೌಡರವರಿಗೆ ದೆಹಲಿ ಕರ್ನಾಟಕ ಸಂಘದಿಂದ ಸನ್ಮಾನ




ಮಂಡ್ಯ ಜಿಲ್ಲೆ ಮಾತ್ರವಲ್ಲ ಕರ್ನಾಟಕದಾದ್ಯಂತ ಐದು ರೂಪಾಯಿ 'ಡಾಕ್ಟರ್' ಎಂದೇ ವ್ಯಾಪಕವಾಗಿ ಹೆಸರಾಗಿರುವ ಖ್ಯಾತ ಚರ್ಮರೋಗ ತಜ್ಞ ಡಾ. ಶಂಕರೇ ಗೌಡರವರು ಸಿ.ಎನ್. ಎನ್. ನ್ಯೂಸ್ 18 ಟಿವಿ ಚಾನೆಲ್‌ರವರು ಅವರ ಸೇವೆಯನ್ನು ಗುರುತಿಸಿ ಸಾಮಾಜಿಕ ಪರಿವರ್ತನೆ ವಿಭಾಗದಲ್ಲಿ ನೀಡಿದ, ವರ್ಷದ ಭಾರತೀಯ 2022ರ ಪ್ರಶಸ್ತಿ ಪುರಸ್ಕೃತರಾಗುವ ಮೂಲಕ ಇಡೀ ದೇಶದುದ್ದಗಲಕ್ಕೂ ಪರಿಚಿತಗೊಂಡಿರುವುದು ನಾಡಿನ ಸಮಸ್ತ ಕನ್ನಡಿಗರಿಗೂ ಗೌರವ ತಂದಿದೆ. ಅಕ್ಟೋಬರ್ 14ರಂದು ಸಿ.ಎನ್.ಎನ್. ನ್ಯೂಸ್ 18 ನವದೆಹಲಿಯಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಿಗಳಾದ ಶ್ರೀ ನಿತಿನ್ ಗಡ್ಕರಿಯವರು ಇವರಿಗೆ ಈ ಪ್ರಶಸ್ತಿಯನ್ನು ಪ್ರಧಾನ ಮಾಡಿದ್ದಾರೆ.

ಇಂತಹ ಅಪರೂಪದ ಸಾಧಕ ಡಾ. ಶಂಕರೇ ಗೌಡ, ತಮ್ಮ ಎಂ.ಬಿ.ಬಿ.ಎಸ್, ಎಂ.ಡಿ. ಪದವಿ ಮುಗಿಸಿ ಅಧಿಕಾರ, ಹಣ ಮೊದಲಾದವುಗಳಿಗಾಗಿ ಹಿಂದೆ ಬೀಳದೆ 1982ರಿಂದಲೂ ತಮ್ಮ ಬಳಿಗೆ ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಐದು ರೂಪಾಯಿಗಳನ್ನು ಮಾತ್ರ ಶುಲ್ಕವಾಗಿ ತೆಗೆದುಕೊಳ್ಳುವುದ್ದಕ್ಕಾಗಿ ಇವರನ್ನು ಐದು ರೂಪಾಯಿ ಡಾಕ್ಟರ್ ಎಂಬ ಉಪನಾಮದಿಂದ ಎಲ್ಲರಿಂದಲೂ ಗುರುತಿಸಲ್ಪಡುತ್ತಾರೆ.ಇವರು ಬಡವರ ಪಾಲಿಗೆ ವೈದ್ಯ ನಾರಾಯಣನೇ ಆಗಿರುವುದು ನಿಜಕ್ಕೂ ಸಮಸ್ತ ವೈದ್ಯ ಕುಲಕ್ಕೆ ಮಾದರಿ. ಇವತ್ತಿನ ಸಮಾಜದಲ್ಲಿ ತಮ್ಮ ಜ್ಞಾನವನ್ನು ಜನಕಲ್ಯಾಣಕ್ಕೆ ಬಳಸಿಕೊಳ್ಳುತ್ತಿರುವುದರಿಂದ ಇವರು ಎಲ್ಲರಿಗೂ ಪ್ರೇರಣೆಯಾಗಿದ್ದಾರೆ. ವಿಶೇಷವಾಗಿ ಗ್ರಾಮೀಣ ಜನರಿಗೆ ಹೃದಯಪೂರ್ವಕವಾಗಿ ಸೇವೆ ಸಲ್ಲಿಸಿರುವ ಇವರು ಮೃದು ಸ್ವಭಾವ, ನಿಸ್ವಾರ್ಥ ಸೇವೆ, ಸರಳತೆಗಳ ಮೂಲಕ ಆದರ್ಶ ಜೀವನವನ್ನು ನಡೆಸಿದವರು. ಡಾ. ಶಂಕರೇ ಗೌಡ ಅವರು ವೈದ್ಯರಾಗಿ ಮಾತ್ರವಲ್ಲದೆ, ಕೃಷಿಕನಾಗಿಯೂ ಗುರುತಿಸಿಕೊಂಡಿದ್ದಾರೆ ಎನ್ನುವುದು ನಿಜಕ್ಕೂ ಪ್ರೇರಣದಾಯಕ. ಸ್ವಗ್ರಾಮ ಮಂಡ್ಯ ತಾಲೂಕಿನ ಶಿವಳ್ಳಿಯ ಗ್ರಾಮದಲ್ಲಿ ಹತ್ತಾರು ಎಕರೆ ಜಮೀನು ಹೊಂದಿರುವ ಇವರು ಪ್ರತಿವರ್ಷ ಕಬ್ಬು, ಭತ್ತ ಬೆಳೆಯುತಾರೆ. ಅತ್ತ ವೈದ್ಯರಾಗಿ, ಇತ್ತ ಕೃಷಿಕನಾಗಿ ಶಂಕರೇ ಗೌಡ ಕೆಲಸ ಮಾಡುತ್ತಾರೆ. ತಮ್ಮ ಹಳ್ಳಿಗೆ ಭೇಟಿ ನೀಡಿದಾಗ ಅಥವಾ ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗಿಯಾದ ಸಂದರ್ಭಗಳಲ್ಲಿ ತಮ್ಮ ಬಳಿ ಯಾರೇ ವೈದ್ಯಕೀಯ ಸಲಹೆ ಕೋರಿದಾಗ ಅವರು ಉಚಿತವಾಗಿ ಪರಾಮರ್ಶೆ, ಸಲಹೆ ಮತ್ತು ಸೂಕ್ತ ಉಪಚಾರ ನೀಡುತ್ತಾರೆ.

ಇವರಿಗೆ ನಾನಾ ಪ್ರಶಸ್ತಿಗಳು ಲಭಿಸಿರುವುದರ ಜೊತೆಗೆ ಇಂತಹ ಮಹನೀಯರನ್ನು ಗುರುತಿಸಿ ಕಳೆದ 16ನೇ ಅಕ್ಟೋಬರ್, 2022 ರಂದು ಅಮೃತ ಮಹೋತ್ಸವ ಸಂಭ್ರಮಾಚರಣೆ ಅಂಗವಾಗಿ ಸಂಘದ ಸಭಾಂಗಣದಲ್ಲಿ ನಡೆದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘವು ಇವರನ್ನು ಗೌರವಿಸಿ ಸನ್ಮಾನಿಸಿರುವುದು ಎಲ್ಲಾ ಕನ್ನಡಿಗರಿಗೆ ಸಂತಸದ ವಿಷಯ.

**ಎಂ ಕೃಷ್ಣಪ್ಪ,** ಗುರುಗಾಂವ್ ಕನ್ನಡಿಗ

# ದೆಹಲಿ ಕರ್ನಾಟಕ ಸಂಘದಲ್ಲಿ ಯಶಸ್ವಿಯಾಗಿ ನೆರವೇರಿದ
# ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಲೆನಾಡು ಸಾಂಸ್ಕೃತಿಕ ಉತ್ಸವ




ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಮಲೆನಾಡು ಸಾಂಸ್ಕೃತಿಕ ಉತ್ಸವದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ವಿಶಿಷ್ಟ ಸೊಗಡನ್ನು ಹೊತ್ತು ತಂದ ವಿವಿಧ ತಂಡಗಳ ನೂರ ಇಪ್ಪತ್ತಕ್ಕೂ ಹೆಚ್ಚು ಕಲಾವಿದರಿಂದ ಅದ್ಭುತವಾದ ಮನೋರಂಜನೆ, ವಿವಿಧ ಗ್ರಾಮೀಣ ಜಾನಪದ ಕಲೆಗಳು, ಸುಗಮ ಸಂಗೀತ, ನಾನಾ ಪ್ರಕಾರಗಳ ಗೀತೆಗಳು, ಎರಡು ಅದ್ಭುತ ನಾಟಕಗಳ ಪ್ರದರ್ಶನ, ಏಕ ಪಾತ್ರಾಭಿನಯ, ಭರತನಾಟ್ಯ ವೈವಿದ್ಯ ನೃತ್ಯ ಪ್ರದರ್ಶನ, ಹಾಗು ಶ್ರೀ ಹಿರೇಮಗಳೂರು ಕಣ್ಣನ್‌ರವರ ಜುಗಲ್ ಬಂದಿ ಹರಟೆ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳು ಅಕ್ಟೋಬರ್ 29 ಶನಿವಾರ ಮತ್ತು 30 ಭಾನುವಾರ ರಂದು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಯಶಸ್ವಿಯಾಗಿ ಮೂಡಿ ಬಂದು ದೆಹಲಿಯ ಕನ್ನಡಿಗರನ್ನು ಮಂತ್ರ ಮುಗ್ಧರನ್ನಾಗಿಸಿದವು.

ಅಕ್ಟೋಬರ್ 29 ರ ಶನಿವಾರ ಬೆಳಿಗ್ಗೆ ಪ್ರಾರಂಭಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಲೆನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಕಲಾ ತಂಡಗಳ ಮುಖ್ಯಸ್ಥರು, ಕಲಾವಿದರು ಮತ್ತು ಕಲಾಪೋಷಕರಿಂದ, ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರ ಉಪಸ್ಥಿತಿಯಲ್ಲಿ ದೀಪ ಬೆಳಗಿಸುವ ಮೂಲಕ ನೆರವೇರಿಸಲಾಯಿತು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ನಾನಾ ಬಗೆಯ ಸಾಂಸ್ಕೃತಿಕ ಕಲೆ ಮತ್ತು ಕಲಾವಿದರನ್ನು ಗುರುತಿಸಿ ದೆಹಲಿಗೆ ಕರೆಸಿ ಕರ್ನಾಟಕ ಮತ್ತು ಹೊರನಾಡ ಕನ್ನಡಿಗರ ನಡುವೆ ಅವಿನಾಭಾವ ಸಂಬಂಧ ಬೆಸೆಯುವ ನಿಟ್ಟಿನಲ್ಲಿ ದೆಹಲಿ ಕನ್ನಡಿಗರಿಗೆ ಇಷ್ಟೊಂದು ಅದ್ಭುತವಾದ ಸಾಂಸ್ಕೃತಿಕ ಮತ್ತು ಮನೋರಂಜನೆ ಕಾರ್ಯಕ್ರಮಗಳನ್ನು ನೀಡುತ್ತಾ ಕನ್ನಡ ಪರ ಕೆಲಸಗಳನ್ನು ಮಾಡುತ್ತಾ ಬರುತ್ತಿರುವ ದೆಹಲಿ ಕರ್ನಾಟಕ ಸಂಘ ಹೊರನಾಡಿನ ಕನ್ನಡ ಸಂಘಗಳಲ್ಲಿಯೇ 'ನಂಬರ್ 1' ಕನ್ನಡ ಸಂಘವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ ಎನ್ನುವುದು ದೆಹಲಿ ಕನ್ನಡಿಗರಾದ ನಮ್ಮಗೆಲ್ಲ ಹೆಮ್ಮೆ.

ಮಲೆನಾಡಿನ ಸೊಬಗನ್ನು ಪರಿಚಯಿಸುವುದರ ಜೊತೆ ಜೊತೆಗೆ ಸಮಾಜಕ್ಕೆ ಉತ್ತಮವಾದ ಸಂದೇಶವನ್ನು ನೀಡುವಂತಹ ಕಥೆಯನ್ನು ಆಧರಿಸಿದ ರಂಗಾಯಣ ಶಿವಮೊಗ್ಗ ಕಲಾವಿದರಿಂದ ಮೂಡಿ ಬಂದ, ಶ್ರೀ ಗಣೇಶ್ ಮಂದಾರ್ತಿ ಹಾಗು ಶ್ರೀ ಶ್ರವಣ್ ಹೆಗ್ಗೋಡು ನಿರ್ದೇಶಿಸಿರುವ ಅದ್ಭುತವಾದ 'ಹಕ್ಕಿ ಕಥೆ' ನಾಟಕ ದೆಹಲಿ ಕನ್ನಡಿಗರ ಮನದಲ್ಲಿ ಚಿರಕಾಲ ಇರುವಂತದ್ದಾಗಿದೆ. ಇದು ಬರೀ ನಾಟಕ ಮಾತ್ರವಲ್ಲ ಪ್ರತಿಯೊಬ್ಬ ಮನುಷ್ಯನಿಗೂ ಸಹ ಪ್ರಕೃತಿಯನ್ನು ಉಳಿಸುವ ಜವಾಬ್ದಾರಿಯ ಸಂದೇಶವನ್ನು ನೀಡಿದೆ, ಜೊತೆಗೆ ಮನುಷ್ಯ ಸಮಯಕ್ಕೆ ಸರಿಯಾಗಿ ಎಚ್ಚರಗೊಂಡು ಪ್ರಕೃತಿಯನ್ನು ಉಳಿಸದಿದ್ದರೆ ಮನುಷ್ಯನೂ ಕೂಡ ಒಂದು ದಿನ ಈ ಹಕ್ಕಿ ಕಥೆಯಂತೆ ತೊಂದರೆಗೆ ಒಳಗಾಗಿ ಕಷ್ಟ ಅನುಭವಿಸುವುದು ನಿಶ್ಚಿತ ಎಂಬ ಎಚ್ಚರಿಕೆ ನೀಡುವುದರ ಜೊತೆಗೆ, ಭೂಮಿಯ ಮೇಲೆ ಎಲ್ಲ ಜೀವಿಗಳಿಗೂ ಸಹ ಮನುಷ್ಯನಷ್ಟೇ ಜೀವಿಸುವ ಹಕ್ಕಿದೆ. ಆದ್ದರಿಂದ ಮನುಷ್ಯನೇ ನೀನು ಬದುಕು, ಬೇರೆ ಜೀವಿಗಳಿಗೂ ಬದುಕಲು ಬಿಡು, ಪ್ರಕೃತಿಯನ್ನು ಉಳಿಸು ಎಂದು ಸಾರಿ ಸಾರಿ ಹೇಳಿದಂತಿತ್ತು ಅದ್ಭುತವಾಗಿ ಮೂಡಿ ಬಂದ ಈ 'ಹಕ್ಕಿ ಕಥೆ' ನಾಟಕ ಸಮಸ್ತ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು.




ಸಂಘದ ವೇದಿಕೆಯಲ್ಲಿ ಭಾನುವಾರ 30 ರಂದು ಪ್ರದರ್ಶನಗೊಂಡ ಡಾ. ಸಾಸ್ವೇಹಳ್ಳಿ ಸತೀಶ್ ರಚಿಸಿ ನಿರ್ದೇಶಿಸಿದ ಭಾರತ ಸ್ವಾತಂತ್ರ್ಯ ಹೋರಾಟದ ಸತ್ಯಕಥೆ ಆಧಾರಿತ "ಏಸೂರು ಕೊಟ್ಟರೂ, ಈಸೂರು ಕೊಡೆವು" ನಾಟಕವನ್ನು ಶಿವಮೊಗ್ಗದ 'ಹೊಂಗಿರಣ' ಕಲಾ ಸಂಸ್ಥೆಯ 40 ಕಲಾವಿದರ ತಂಡ ಪ್ರಸ್ತುತಪಡಿಸಿತು. ಇವುಗಳ ಜೊತೆಗೆ, ನೃತ್ಯ ಗುರು ಸಹನಾ ಚೇತನ್ ಸಂಯೋಜಿಸಿ ಪ್ರಸ್ತುತಪಡಿಸಿದ ಸಹಚೇತನ ನಾಟ್ಯಾಲಯ ಶಿವಮೊಗ್ಗ ಕಲಾವಿದರಿಂದ ಭರತನಾಟ್ಯ ವೈವಿಧ್ಯ ಹಾಗೂ ಅಭಿನವ ಪ್ರತಿಭಾ ವೇದಿಕೆ ನರಸಿಂಹರಾಜಪುರದ ಶ್ರೀ ಎಸ್. ಗಿರೀಶ್ ಕುಮಾರ್ ತಂಡದಿಂದ ಗೀಗಿ ಪದಗಳು, ಲಾವಣಿ, ಜಾನಪದ ಗೀತೆ, ಭಾವಗೀತೆ, ತತ್ವಪದಗಳು, ಆಂಟಿಗೆ ಪಂಟಿಗೆ ಹಾಡು ಮತ್ತು ಜಾಗೃತಿ ಗೀತೆಗಳು, ಜೊತೆಗೆ ಹಿರೇಮಗಳೂರಿನ ಡಾ. ಬಿ.ಆರ್. ಶಿವಕುಮಾರ್‌ರವರಿಂದ ಸುಗಮ ಸಂಗೀತ, ಮಿಮಿಕ್ರಿ ಕಾರ್ಯಕ್ರಮಗಳು ಉತ್ತಮ ಮೂಡಿ ಬಂದು ಪ್ರೇಕ್ಷಕರನ್ನು ರಂಜಿಸಿದವು. ಹಾಗೆಯೇ, ಮೈಸೂರಿನ ರಂಗಕರ್ಮಿ ಶ್ರೀ ಯು.ಎಸ್. ರಾಮಣ್ಣ ಉಬ್ಬೂರು, ಇವರಿಂದ ಏಕಪಾತ್ರಾಭಿನಯ ಕಂಸಾಳೆ ಹಾಡುಗಳು ಮೂಡಿ ಬಂದವು. ಶ್ರೀ ರಾಮಣ್ಣನವರಿಗೆ ಎಪ್ಪತ್ತಮೂರು ವರ್ಷಗಳಾಗಿದ್ದರೂ ಸಹ ಇನ್ನು ತರುಣನಂತೆ ಅವರೊಳಗೆ ಅಡಗಿರುವ ಕಲೆಯನ್ನು ಹೊರಹಾಕಿ ಎಲ್ಲರನ್ನು ಮನರಂಜಿಸಿದರು. ಕಲಾವಿದ ರಾಮಣ್ಣನವರು ಈ ಸಂದರ್ಭದಲ್ಲಿ ತಮ್ಮ-ತಂದೆ ತಾಯಿಯವರ ನೆನಪಿನ ಸ್ಮರಣೆಗಾಗಿ ದೆಹಲಿ ಕರ್ನಾಟಕ ಸಂಘಕ್ಕೆ 10,000/- ರೂಪಾಯಿ ದೇಣಿಗೆ ನೀಡಿದ್ದು ಅವರ ಉದಾರ ಮನಸನ್ನು ಎತ್ತಿ ತೋರಿಸುತ್ತಿತ್ತು. ಹೊರನಾಡಿನಲ್ಲಿರುವ ಕನ್ನಡ ಸಂಘ ಸಂಸ್ಥೆಗಳು ಇನ್ನೂ ಎತ್ತರಕ್ಕೆ ಬೆಳೆಯಬೇಕು ಅದೇ ನಿಟ್ಟಿನಲ್ಲಿ ನಮ್ಮ ನಾಡಿನ ಸಂಸ್ಕೃತಿಯನ್ನು ಉಳಿಸುವಂತಹ ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘವನ್ನು ಅವರು ಶ್ಲಾಘಿಸಿದರು.

ಮಲೆನಾಡಿನ ಹಳ್ಳಿಗಳಲ್ಲಿ ಪಲ್ಲಕ್ಕಿ ಉತ್ಸವ, ರಥೋತ್ಸವದಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಳ್ಳಿ ವಾದ್ಯಗೋಷ್ಠಿಯು ಕೂಡ ತನ್ನದೇ ಆದ ಮನರಂಜನೆಯನ್ನು ನೀಡುವ ಕಲೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಶ್ರೀ ಮಾರುತಿ ಚಿಟ್ಟೆ ಮೇಳ ಕಲಾ ಸಂಘದ ಕಲಾವಿದರಿಂದ ಗ್ರಾಮೀಣ ವಾದ್ಯ ಗೋಷ್ಠಿ, ಜಾನಪದ ವೈವಿದ್ಯ ಹಾಗು ಶ್ರೀ ವೀರ ಪ್ರತಾಪ ಆಂಜನೇಯ ಸೋಮನ ಕುಣಿತ ಕಲಾಸಂಘ,ಕಡೂರು ತಾಲೂಕಿನ ಕಲಾವಿದರಿಂದ ನೀಡಿದ ಅಮೋಘ ಸೋಮನ ಕುಣಿತ ಪ್ರದರ್ಶನಗಳು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸೇರಿದ್ದ ಕನ್ನಡಿಗರನ್ನು ಮನರಂಜಿಸುವುದರ ಜೊತೆಗೆ ರೋಮಾಂಚನಗೊಳಿಸಿತ್ತು.

ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದ ವಿಶ್ವ ಖ್ಯಾತಿಯ ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಮತ್ತು ಶ್ರೀಮತಿ ನಾಗಶ್ರೀ ತ್ಯಾಗರಾಜ್ ಅವರೊಂದಿಗೆ ನಡೆದ ಜುಗಲ್ಬಂದಿ 'ಸಂಸಾರ-ಸಂಸ್ಕಾರ' ಹರಟೆ ಕಾರ್ಯಕ್ರಮದ ಮೂಲಕ ಸಭಾಂಗಣದಲ್ಲಿ ನೆರೆದಿದ್ದ ಕನ್ನಡಿಗರತ್ತ ನಗೆಯ

ಹೊನಲನ್ನು ಹರಿಸಿ ನಕ್ಕು ನಲಿಸಿದರು. ಕಣ್ಣನ್ ಮಾಮಾ ಅವರ ತಿಳಿ ಹಾಸ್ಯದೊಂದಿಗೆ ಅಪಾರ ಜ್ಞಾನಭರಿತವಾಗಿದ್ದ ಹರಟೆ ಕಾರ್ಯಕ್ರಮ ಪ್ರೇಕ್ಷಕರ ಗಮನವನ್ನು ಸೂಜಿಗಲ್ಲಿನಂತೆ ಸೆಳೆದಿತ್ತು, ಮಾತ್ರವಲ್ಲ ಕನ್ನಡವನ್ನು ಬಳಸಿ ಉಳಿಸುವ ಬಗ್ಗೆ ಅರಿವು ಮೂಡಿಸಿದ ಬಗೆ ನಿಜಕ್ಕೂ ಬೆರಗುಗೊಳಿಸುವಂತಿತ್ತು.

ಶಿವಮೊಗ್ಗದ ಸಹಚೇತನ ನಾಟ್ಯಾಲಯದ 12 ಕಲಾವಿದರು ಸುಮಧುರವಾದ ಕನ್ನಡ ಗೀತೆಗಳ ಆಧಾರಿತ ವೈವಿಧ್ಯಮಯ ಭರತ ನಾಟ್ಯ ನೃತ್ಯ ಮಾಡಿ ದೆಹಲಿ ಕನ್ನಡಿಗರ ಮನರಂಜಿಸಿದರು. ನಾಟ್ಯ ಸಂಯೋಜಕಿ ನೃತ್ಯ ಗುರು ಸಹನಾ ಚೇತನ್ ಅವರು ತಮ್ಮ ತಂಡಕ್ಕೆ ಅವಕಾಶ ನೀಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ನಮ್ಮ ಅಭಿಮಾನ ಸದಾ ಈ ದೆಹಲಿ ಕರ್ನಾಟಕ ಸಂಘದ ಮೇಲಿರುತ್ತದೆ, ಇದು ನಮ್ಮ ತಂಡಕ್ಕೆ ಅವಿಸ್ಮರಣೀಯ ಕ್ಷಣವಾಗಿದೆ ಎಂದು ಸಹನಾ ಚೇತನ್ ತಮ್ಮ ಮನದಾಳದ ಮಾತುಗಳಿಂದ ನುಡಿದರು.

**ಸಮಾರೋಪ ಸಮಾರಂಭ:** ಸಮಾರೋಪ ಸಮಾರಂಭ'ದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಡಾ. ಪುರುಷೋತ್ತಮ ಬಿಳಿಮಲೆಯವರು ಈ ದೆಹಲಿ ಕರ್ನಾಟಕ ಸಂಘ ಉದ್ಘಾಟನೆ ಆದಾಗ ಕನ್ನಡದಲ್ಲಿ ಪೂಜೆ ಮಾಡುವುದರ ಮೂಲಕ ಕರ್ನಾಟಕದ ಪ್ರಮುಖ ಮಠ ಗಳ ಪೂಜ್ಯ ಸ್ವಾಮೀಜಿಗಳು ಉದ್ಘಾಟನೆಗೆ ಬಂದು ಪೂಜೆ ಮಾಡಿ ಆಶೀರ್ವಾದ ಮಾಡಿ ಹೋದಾಗಿನಿಂದ ಕರ್ನಾಟಕ ಸಂಘ ದೊಡ್ಡ ಮಟ್ಟದಲ್ಲಿ ನಡೆಯುತಿದೆ ಎಂದು ಹಳೆಯ ನೆನಪುಗಳನ್ನು ಸ್ಮರಿಸಿಕೊಂಡರು. ಇದು ಮಲೆನಾಡಿನ ಉತ್ಸವವಾದ್ದರಿಂದ ಕಣ್ಣನ್ ಮಾಮಾ ಈ ಕಾರ್ಯಕ್ರಮಕ್ಕೆ ಬಂದಿರುವುದು ದೆಹಲಿ ಕನ್ನಡಿಗರಿಗೆ ತುಂಬಾ ಸಂತೋಷವಾಗಿದೆ, ಎಲ್ಲ ದೆಹಲಿ ಕನ್ನಡಿಗರ ಪರವಾಗಿ ನಾನು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ನುಡಿದರು. ಮುಖ್ಯ ಅತಿಥಿ ಕನ್ನಡ ಪೂಜಾರಿ ಖ್ಯಾತ ವಾಗ್ಮಿ ಶ್ರೀ ಹಿರೇಮಗಳೂರು ಕಣ್ಣನ್‌ರವರು ಮಾತನಾಡಿ ಮಲೆನಾಡು ಉತ್ಸವವನ್ನು ದೆಹಲಿಯಲ್ಲಿ ಆಯೋಜಿಸಿ ಅಲ್ಲಿನ ಜಿಲ್ಲೆಗಳ ನಾನಾ ಪ್ರಕಾರದ ಕಲೆಗಳನ್ನು, ಸಂಸ್ಕೃತಿಯನ್ನು ದೆಹಲಿ ಕನ್ನಡಿಗರಿಗೆ ಪರಿಚಯಿಸಿ ಮಾಡಿಕೊಟ್ಟು,ಅಲ್ಲಿನ ಕಲಾವಿದರಿಗೆ ಕರ್ನಾಟಕ ಸಂಘದ ವೇದಿಕೆಯಲ್ಲಿ ಪ್ರದರ್ಶನ ಮಾಡಲು ಅವಕಾಶ ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಾಣಿಜ್ಯ ತೆರಿಗೆಗಳ ಇಲಾಖೆ ಜಂಟಿ ಆಯುಕ್ತರು ಹಾಗೂ ಕಲಾವಿದರೂ ಆದ ಶ್ರೀ ಸಂಗಮೇಶ್ ಉಪಾಸೆಯವರು ಮಾತನಾಡಿ ದೇಶ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಜೊತೆಯಲ್ಲೇ ನಮ್ಮ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ನಡೆಯುತ್ತಿರುವುದು ನಮ್ಮ ಸೌಭಾಗ್ಯವಾಗಿದೆ. ಕರ್ನಾಟಕ ಸಂಘ ಇತರ ಸಂಘಗಳಿಗಿಂತಲೂ ಬಹಳ ಜನಪ್ರಿಯವಾಗಿದೆ ಇದೇ ರೀತಿ ಕನ್ನಡ ಸೇವೆ ನಡೆಯುತ್ತಿರಲಿ ನಾವು ಸದಾ ನಿಮ್ಮೊಂದಿಗೆ ಇದ್ದೇವೆ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಜಿಲ್ಲಾವಾರು ಉತ್ಸವಗಳು ನಡೆಯುತ್ತಿದ್ದು ಹೀಗೆ ರಾಜ್ಯದ ಪ್ರಾದೇಶಿಕ ಪ್ರಭೇದಗಳ ಮಧ್ಯೆ ಈ ತರದ ಒಂದು ಪ್ರಾಂತೀಯ ಸೊಗಡನ್ನು ಕಟ್ಟಿಕೊಡುವ ಕೆಲಸವನ್ನು ದೆಹಲಿ ಕರ್ನಾಟಕ ಸಂಘದವರು ಒಂದು ಸರ್ಕಾರ ಮಾಡಬಹುದಾದ ಕೆಲಸಕ್ಕಿಂತ ಮಿಗಿಲಾದ ಕೆಲಸವನ್ನು ಮಾಡಿದ್ದಾರೆ ಎಂದರು.

ನಂತರ ಮಾತನಾಡಿದ ಮತ್ತೊಬ್ಬ ಅತಿಥಿ ಮಾನ್ಯ ಮಾಜಿ ಉಪಮುಖ್ಯಮಂತ್ರಿಗಳು, ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ.ಎಸ್. ಈಶ್ವರಪ್ಪನವರ ಪುತ್ರ ಶ್ರೀ ಕೆ.ಈ. ಕಾಂತೇಶ್ ಅವರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇದೇ ರೀತಿ ಮುಂದೆಯೂ ಕೂಡ ಇಂತಹ ಒಳ್ಳೆಯ ಕೆಲಸಗಳನ್ನು ದೆಹಲಿ ಕರ್ನಾಟಕ ಸಂಘ ಮಾಡಲಿ ನಾವು ಸಹ ನಿಮ್ಮ ಜೊತೆಗಿದ್ದೇವೆ ಎಂದು ತಿಳಿಸಿದರು.

ಮತ್ತೊಬ್ಬ ಅತಿಥಿ ವಾಣಿಜ್ಯ ತೆರಿಗೆಗಳ ಇಲಾಖೆಯ ಸಹಾಯಕ ಆಯುಕ್ತರಾದ ಶ್ರೀ ಮಹಮ್ಮದ್ ರಫಿ ಪಾಷ ಅವರು ಮಾತನಾಡಿ. ನಾನು ಈ ಹಿಂದೆ ದೆಹಲಿಯಲ್ಲಿ ಓದುವಾಗ ಸಂಘದ ಅಂದಿನ ಅಧ್ಯಕ್ಷರಾಗಿದ್ದ ಡಾ. ಪುರುಷೋತಮ ಬಿಳಿಮಲೆ ಅವರು ನನಗೆ ಆಶ್ರಯ ಕೊಟ್ಟಂತವರು. ನಾನು ಇಲ್ಲೇ ಓದಿ ಕೆ.ಎ.ಎಸ್. ಅಧಿಕಾರಿಯಾದೆ ಎಂದು ಹೇಳಲು ಹೆಮ್ಮೆ ಆಗುತ್ತದೆ. ನನಗೆ ಈ ಮಲೆನಾಡು ಉತ್ಸವ ನೋಡಿ ತುಂಬಾ ಸಂತೋಷವಾಗಿದೆ ಎಂದರು.

ಎರಡು ದಿನಗಳ ಕಾಲ ನಡೆದ ಮಲೆನಾಡಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಲೆನಾಡಿನ ಪ್ರಗತಿಪರ ಕೃಷಿ ಸಾಧಕರು, ನಾಗಚಂದ್ರ ಪ್ರತಿಷ್ಠಾನದ ಅಧ್ಯಕ್ಷರು ಮತ್ತು ಜೆ.ಡಿ.ಎಸ್. ರಾಜ್ಯ ವಕ್ತಾರರಾದ ಶ್ರೀ ವಿನಯ್ ಕಣಿವೆರವರು ಮಾತನಾಡಿ ಹಸಿದವರಿಗೆ ಅನ್ನ ನೀಡುವುದು ಸಂಸ್ಕೃತಿ, ಹಸಿದವರ ಅನ್ನ ಕಸಿದು ಕೊಳ್ಳುವುದು ವಿಕೃತಿ, ತಾವು ಹಸಿದಿದ್ದರೂ, ಇನ್ನೊಬ್ಬರಿಗೆ ಅನ್ನ ನೀಡುವುದು ಮಲೆನಾಡಿನ ಸಂಸ್ಕೃತಿ ಎಂದರು. ಹಾಗು ಮಲೆನಾಡಿನ ಹುಲಿ ಯೋಜನೆ, ಮಾಧವ್ ಗಾಡ್ಗಿಲ್ ವರದಿ ಪರಿಶೀಲನೆ, ಕಸ್ತೂರಿ ರಂಗನ್ ವರದಿಯನ್ನು ತೆಗೆದುಕೊಂಡು ಪಶ್ಚಿಮಘಟ್ಟಗಳ, ಮಲೆನಾಡಿನ ಕಾಡಿನ ಸರ್ವೇಕ್ಷಣೆ ಮತ್ತು ಅದರ ಬಗ್ಗೆ ಚಳುವಳಿ ಮುಂತಾದ ವಿಷಯಗಳ ಬಗ್ಗೆ ತಿಳಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಶಿವಮೊಗ್ಗ ರಂಗಾಯಣದ ನಿರ್ದೇಶಕರಾದ ಶ್ರೀ ಸಂದೇಶ ಜವಳಿ ಮತ್ತು ಕನ್ನಡ ಉಪನ್ಯಾಸಕರು, ಶಿವಮೊಗ್ಗ ಹೊಂಗಿರಣ ತಂಡದ, ನಿರ್ದೇಶಕರಾದ ಡಾ. ಸಾಸ್ವೇಹಳ್ಳಿ ಸತೀಶ್, ಹಾಗು 2021 ರ ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿ

## ತಾಂತ್ರಿಕ ಯಶಸ್ಸಿನ 'ಹಕ್ಕಿ ಕಥೆ'



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 29.10.2022 ರಂದು ನಡೆದ ಮಲೆನಾಡು ಸಾಂಸ್ಕೃತಿಕ ಉತ್ಸವದ ಭಾಗವಾಗಿ ಶಿವಮೊಗ್ಗ ರಂಗಾಯಣದವರು 'ಹಕ್ಕಿ ಕಥೆ' ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಜಪಾನಿನ ಬುನ್ರಾಕುವಿನಂದ (ಜಪಾನೀ ಬೊಂಬೆಯಾಟ) ಕೆಲವು ತಂತ್ರಗಳನ್ನು ಅಳವಡಿಸಿಕೊಂಡ ಈ ನಾಟಕವು ಸಾಧಿಸಿದ ತಾಂತ್ರಿಕ ಯಶಸ್ಸು ಬಹಳ ವಿಶೇಷವಾದುದು. ಮಕ್ಕಳಿಗೆ ಹೆಚ್ಚು ಆಪ್ತವಾಗಬಲ್ಲ ಸಿನೇಮಾ ಮಾದರಿಯ ಈ ನಾಟಕವನ್ನು ನನ್ನಂಥವರೂ ನೋಡಿ ಸಂತೋಷ ಪಟ್ಟದ್ದು (ದು:ಖ ಪಟ್ಟದ್ದು) ಮಾತ್ರ ನಿಜ. ನಾಟಕವನ್ನು ಶ್ರೀ ಗಣೇಶ್ ಮಂದಾರ್ತಿ ಹಾಗೂ ಶ್ರೀ ಶ್ರವಣ್ ಹೆಗ್ಗೋಡು ನಿರ್ದೇಶಿಸಿದ್ದಾರೆ. ನನ್ನ ಫೇಸ್ ಬುಕ್ ಗೆಳೆಯನಾದ ಸುಜಿತ್ ಕಾರ್ಕಳ ನಟಿಸುತ್ತಾನೆಂದು ಗೊತ್ತಿದ್ದರಿಂದ ಮೊದಲೇ ಮೇಕಪ್ ರೂಮಿಗೆ ಹೋಗಿ ಅವನ ಮುಖನೋಡಿ, ರಂಗದ ಮೇಲೆ ಅವನನ್ನು ಪತ್ತೆ ಹಚ್ಚುವುದು ನನ್ನ ಮುಖ್ಯ ಕೆಲಸಗಳಲ್ಲಿ ಒಂದಾಗಿತ್ತು.

ಮಲೆನಾಡಿನ ಹಿರಿಯ ಸಾಹಿತಿ ನಾ. ಡಿಸೋಜಾ ಅವರ ಕಾದಂಬರಿ ಆಧಾರಿತ 'ಹಕ್ಕಿ ಕಥೆ' ನಾಟಕವು ಮಲೆನಾಡು ನಾಶವಾಗುತ್ತಿರುವುದನ್ನು ಅತ್ಯಂತ ಮನೋಜ್ಞವಾಗಿ ದೃಶ್ಯೀಕರಿಸುತ್ತದೆ. ನೇತ್ರಾವತಿ ತಿರುಗಿಸುವುದು, ತುಂಗಾ ಮೂಲಕ್ಕೆ ಕೈ ಹಾಕುವುದು, ಸಹ್ಯಾದ್ರಿಯನ್ನು ಲೂಟಿ ಮಾಡುವುದು, ಬಾಬಾ ಬುಡನ್ ಗಿರಿಯ ಪಾವಿತ್ರ್ಯವನ್ನು ನಾಶ ಮಾಡುವುದು – ಇತ್ಯಾದಿಗಳನ್ನು ಕಣ್ಣಾರೆ ಕಾಣುತ್ತಿರುವ ನಮಗೆ ಪರಿಸರ ನಾಶವು ಮುಖ್ಯ ವಿಷಯವೇ ಅಲ್ಲ. ಅಭಿವೃದ್ಧಿ ಆಗುವುದು ಮತ್ತೆ ಹೇಗೆ? ಎಂಬುದು ನಮ್ಮ ನಡುವಣ ಅತ್ಯಂತ ಸರಳವಾದ ಮತ್ತು ಬೇಜವಾಬ್ದಾರಿಯ ಮಾತು. ಈ ನಡುವೆ ನಾಟಕವು ಪ್ರಕೃತಿಯ ಇತರ ಜೀವಿಗಳ ಸಹಜ ಬದುಕಿನ ಮೇಲೆ ಮಾನವನ ಹಸ್ತಕ್ಷೇಪ ಎಷ್ಟೊಂದು ಕ್ರೌರ್ಯದಿಂದ ಕೂಡಿದೆ ಮತ್ತು ಅದಕ್ಕೆ ಮಾನವ ತೆರಬೇಕಾದ ಬೆಲೆ ಏನು ಎಂಬುದನ್ನು ಹಕ್ಕಿಗಳ ಬದುಕನ್ನು ಆಧರಿಸಿ ವಿವರಿಸುತ್ತದೆ. ಪಂಚತಂತ್ರ, ಜನಪದ ಕತೆಗಳು ಮೊದಲಾದ ಕಡೆಗಳಲ್ಲಿ ಪ್ರಾಣಿಗಳು ಮಾತಾಡುವುದನ್ನು ಓದಿರುವ ನಮಗೆ ಹಕ್ಕಿಗಳ ಮಾತು ನೇರವಾಗಿ ಎದೆಗಿಳಿಯುತ್ತದೆ. ಸಹ್ಯಾದ್ರಿಯ ಮೇಲಣ ಮಾನವರ ಆಕ್ರಮಣಕ್ಕೆ ಬೆದರಿದ ಹಕ್ಕಿಗಳು ಕಾಡು ತೊರೆದು ನಾಡಿಗೆ ಬರುತ್ತವೆ. ಆದರೆ ಅಲ್ಲಿ ಅವಕ್ಕೆ ದೊರೆಯುವುದು ವಿಷದ ನೀರು, ಹೊಗೆ ಮತ್ತು ಮುಳುಗಡೆಯ ಸಾವು. ಮೊಬಾಯಿಲ್ ಟವರುಗಳೂ ಅವಕ್ಕೆ ದಕ್ಕುವುದಿಲ್ಲ.

ನಾಟಕ ನೋಡುತ್ತಿದ್ದಂತೆಯೇ ನನ್ನ ನೆನಪುಗಳು 25 ವರ್ಷದ ಹಿಂದಕ್ಕೆ ಓಡಿದುವು. 1997ರಲ್ಲಿ ನಾನು ಕರ್ನಾಟಕ ಬಿಟ್ಟು ದಕ್ಷಿಣ ದೆಹಲಿಯ ವಸಂತಕುಂಜದಲ್ಲಿ ಮನೆ ಮಾಡಿದ್ದಾಗ ಮನೆತುಂಬ ಗುಬ್ಬಚ್ಚಿ ಗೂಡುಗಳಿದ್ದವು.ಬಿರು ಬಿಸಿಲಲ್ಲಿ ಅವಕ್ಕೆ ನೀರಿಡುತ್ತಿದ್ದೆವು. ಈಗ ಒಂದು ಗುಬ್ಬಚ್ಚಿಯೂ ಇಲ್ಲ. ಸುಮಾರು 500 ವರ್ಷಗಳಲ್ಲಿ ಸಂಭವಿಸಬಹುದಾದ ಅನಾಹುತವನ್ನು 25 ವರ್ಷಗಳಲ್ಲಿಯೇ ಮಾಡಿದೆವು ಅನಿಸಿ ಬಿಟ್ಟಿತು. 2002ರಲ್ಲಿ ದೆಹಲಿ ವಿವಿಯಲ್ಲಿ ಏರ್ಪಡಿಸಿದ್ದ ಪ್ರದರ್ಶನವೊಂದರಲ್ಲಿ ಪಶ್ಚಿಮ ಘಟ್ಟದಿಂದ ಕಾಣೆಯಾದ 60ಕ್ಕೂ ಹೆಚ್ಚು ಪ್ರಾಣಿ ಮತ್ತು ಪಕ್ಷಿಗಳ ಚಿತ್ರಗಳನ್ನು ತೋರಿಸಿದ್ದರು. ಅವುಗಳಲ್ಲಿ ಹಲವನ್ನು ನಾನು ಶಾಲೆಗೆ ಹೋಗುವಾಗ ಬಂಟಮಲೆಯಲ್ಲಿ ಕಂಡಿದ್ದೆ. ಈಗ ಅವು ಜಗತ್ತಿನಿಂದಲೇ ಕಾಣೆಯಾಗಿವೆಯಂತೆ!

ಒಳ್ಳೆಯ ನಾಟಕ ನೀಡಿದ ಶಿವಮೊಗ್ಗ ರಂಗಾಯಣಕ್ಕೆ ಅಭಿನಂದನೆಗಳು.

**ಡಾ. ಪುರುಷೋತ್ತಮ ಬಿಳಿಮಲೆ**

ಪುರಸ್ಕೃತ ಹೆಗ್ಗೋಡಿನ ಅಕ್ಷರ ಪ್ರಕಾಶನ ಸಂಸ್ಥೆಯ ಶ್ರೀ ಶಿಶಿರಾ ಕೆ.ವಿ. ಮೊದಲಾದ ಎಲ್ಲಾ ಗಣ್ಯರು ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿ ಇಂತಹ ಉತ್ತಮವಾದ ಕೆಲಸಗಳನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಜೊತೆ ನಾವಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ಮಾತನಾಡಿ ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘವು ಅನೇಕ ಕನ್ನಡಪರ ಕಾರ್ಯಕ್ರಮಗಳನ್ನು ಮಾಡಲು ಹಾಕಿಕೊಂಡಿರುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಕರ್ನಾಟಕದಿಂದ ಐಎಎಸ್ ಓದಲು ಬರುವ ಮಕ್ಕಳಿಗೆ ವಸತಿ ವ್ಯವಸ್ಥೆ, ಊಟದ ವ್ಯವಸ್ಥೆ ಮಾಡಲು ಕೈ ಹಾಕಿರುವ ಕೆಲಸ ಒಂದೊಂದಾಗಿ ಮುಂದೆ ಸಾಗುತ್ತಿದೆ. ಇಂತಹ ದೊಡ್ಡ ಕೆಲಸಗಳಲ್ಲಿ ನಿಮ್ಮಂತಹ ಮಹದಾನಿಗಳ ಗಣ್ಯರ ಸಹಕಾರ ಪ್ರೋತ್ಸಾಹವಿರಲಿ ಎಂದು ಕೇಳಿಕೊಂಡರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಈ ಮಲೆನಾಡು ಸಾಂಸ್ಕೃತಿಕ ಉತ್ಸವ ವಿಜೃಂಭಣೆಯಿಂದ ಯಶಸ್ವಿಯಾಗಲು ಕಾರಣರಾದ ಎಲ್ಲಾ ಗಣ್ಯರನ್ನು ಮಹಾದಾನಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾವಿರಾರು ಮೈಲಿ ದೂರದಿಂದ ಇಷ್ಟೊಂದು ಕಲಾವಿದರ ಜೊತೆ ಬಂದ ಕಲಾವಿದರ ತಂಡವನ್ನು ಪ್ರೋತ್ಸಾಹಿಸಿ ಬೆನ್ನು ತಟ್ಟುವ ಕೆಲಸವನ್ನು ನಾವೆಲ್ಲರೂ ಕೂಡಿ ಮಾಡುತ್ತಾ ದೆಹಲಿ ಕರ್ನಾಟಕ ಸಂಘವು 75 ವರ್ಷಗಳಿಂದ ಅಳಿಯದೆ ಉಳಿಯುವ ಅನೇಕ ಕೆಲಸಗಳನ್ನು ಬಹಳಷ್ಟು ಮಹನೀಯರ ಮಾರ್ಗದರ್ಶನದಂತೆ ಮಾಡಿಕೊಂಡು ಬಂದಿದೆ. ಎಲ್ಲ ಮಹನೀಯರ ಆಸೆ ದೆಹಲಿಯಲ್ಲಿ ಕನ್ನಡದ ಬೆಳವಣಿಗೆಗೆ ಸಾಧ್ಯವಾದಷ್ಟು ಕೆಲಸ ಮಾಡಬೇಕು ಅನ್ನುವುದಾಗಿದೆ. ಅಂಥವರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಸಿ.ಎಂ. ನಾಗರಾಜ ಅಂಥವರು ಇದ್ದಾರೆ ಹಿರಿಯರ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಸಹಕಾರದಲ್ಲಿ



ಇನ್ನಷ್ಟು ಉತ್ತಮ ಕೆಲಸವನ್ನು ಮಾಡುವುದರ ಮೂಲಕ ಕನ್ನಡದ ಬೆಳವಣಿಗೆಗೆ ಪೂರಕವಾಗಬೇಕು ಎಂದು ಮಹಾದಾನಿಗಳ ಇದೇ ರೀತಿಯ ಪ್ರೋತ್ಸಾಹ ಸಹಕಾರ ಸದಾ ದೆಹಲಿ ಕರ್ನಾಟಕ ಸಂಘದ ಮೇಲಿರಲಿ ಎಂದು ಕೇಳಿಕೊಂಡರು.

ಮಲೆನಾಡು ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದ ಎಲ್ಲಾ ಕಲಾವಿದರಿಗೂ ಅಭಿನಂದನಾ ಪತ್ರ ಹಾಗು ಸ್ಮೃತಿ ಚಿಹ್ನೆಗಳನ್ನು ನೀಡಿ ಗೌರವಿಸಲಾಯಿತು. ಈ ಮಲೆನಾಡು ಸಾಂಸ್ಕೃತಿಕ ಉತ್ಸವದ ಎಲ್ಲಾ ಕಲಾ ತಂಡಗಳ ಉಸ್ತುವಾರಿ ವಹಿಸಿದ್ದ ಶ್ರೀ ಕೆ.ಎಸ್. ಮೂರ್ತಿ ಅವರು ತಮ್ಮ ಜವಾಬ್ದಾರಿಯನ್ನು ತುಂಬಾ ಅಚ್ಚುಕಟ್ಟಾಗಿ ನಿಭಾಯಿಸಿ ಎಲ್ಲರ ಮೆಚ್ಚುಗೆ ಪಡೆದರು.

ಕಾರ್ಯಕ್ರಮಕ್ಕೆ ಸಹಕಾರ ನೆರವು ನೀಡಿದ ಶ್ರೀ ಕೆ.ಈ. ಕಾಂತೇಶ್, ಶ್ರೀ ವಿನಯ್ ಕಣಿವೆ, ಡಾ. ದಮಯಂತಿ ಗೌಡ ರಾವ್, ಶ್ರೀಮತಿ ಆರಾಧನಾ ಕೆ.ಸಿ., ಶ್ರೀ ವೆಂಕಟೇಶ ಮೂರ್ತಿ, ಶ್ರೀ ಯು.ಎಸ್. ರಾಮಣ್ಣ ಮೊದಲಾದ ಗಣ್ಯರನ್ನು ಸನ್ಮಾನಿಸಲಾಯಿತು.

ಎರಡು ದಿನಗಳ ಕಾಲ ನಡೆದ ಮಲೆನಾಡು ಉತ್ಸವ ಕಾರ್ಯಕ್ರಮದ ನಿರೂಪಣೆಯನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾರಾವ್ ಸುಂದರ ವಾಗಿ ನಡೆಸಿಕೊಟ್ಟರು. ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರುಗೋಡ ಹಾಗೂ ಸದಸ್ಯರಾದ. ಶ್ರೀ ಪ್ರಭಾಕರ್ ಮಡ್ಡಿತೋಟ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಆಶ್ವಿನಿ ಬಿ.ಎಸ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀ ಕೆ.ಎಸ್. ಮೂರ್ತಿ, ಶ್ರೀ ಚಂದ್ರಶೇಖರ ಎನ್.ಪಿ. ಮತ್ತು ಶ್ರೀ ಸಂತೋಷ ಜೆ. ಅವರು ಎಲ್ಲ ಕಲಾ ತಂಡಗಳ ಮತ್ತು ಅವುಗಳ ಮುಖ್ಯಸ್ಥರ ಪರಿಚಯವನ್ನು ಮಾಡಿಕೊಟ್ಟರು. ಸಂಘದ ಜಂಟಿ ಕಾರ್ಯದರ್ಶಿ ಬಿ. ನಾರಾಯಣ ಅವರು ವಂದನಾರ್ಪಣೆಯನ್ನು ಅರ್ಪಿಸಿದರು.

ಮಲೆನಾಡಿನ ಕಲಾವಿದರಿಂದ, ದೆಹಲಿ ಎನ್.ಸಿ.ಆರ್.ನ. ಕನ್ನಡಿಗರಿಂದ ತುಂಬಿದ್ದ ಸಂಘದ ಸಭಾಂಗಣದಲ್ಲಿ ಮಲೆನಾಡು ಸಾಂಸ್ಕೃತಿಕ ಉತ್ಸವ ಶ್ರೀ ಕಣ್ಣನ್ ಮಾಮಾ ಮತ್ತು ಶ್ರೀಮತಿ ನಾಗಶ್ರೀ ತ್ಯಾಗರಾಜ್‌ರವರ ಹರಟೆ ಕಾರ್ಯಕ್ರಮದೊಂದಿಗೆ ಅತ್ಯಂತ ಯಶಸ್ವಿಯಾಗಿ ಸಂಪನ್ನವಾಯಿತು.

**ತಿಮ್ಮಪ್ಪ ಜಿ.ಆರ್** ಮತ್ತು
**ಸುಧೀರ್ ಕೀಳಂಬಿ**

# ಹೆಗ್ಗೋಡಿನ ಅಕ್ಷರ ಪ್ರಕಾಶನ ಸಂಸ್ಥೆಗೆ ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿ ಪ್ರಧಾನ:



ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಸಂಚಲನ ಮೂಡಿಸಿದ ಕೆ.ವಿ. ಸುಬ್ಬಣ್ಣ ಅವರು ಶಿವಮೊಗ್ಗದ ಹೆಗ್ಗೋಡಿನಲ್ಲಿ ಕಟ್ಟಿರುವ ಅಕ್ಷರ ಪ್ರಕಾಶನ ಕನ್ನಡ ಸಾಹಿತ್ಯ ಲೋಕದ ದೊಡ್ಡ ಪ್ರಕಾಶನ ಸಂಸ್ಥೆಗಳಲ್ಲಿ ಒಂದು. ವೈದೇಹಿ, ಯು. ಆರ್. ಅನಂತಮೂರ್ತಿ, ವಿವೇಕ್ ಶಾನಭಾಗ್, ಕೆ.ವಿ. ಸುಬ್ಬಣ್ಣ, ಎಂ.ಎಸ್. ಶ್ರೀರಾಮ್, ಕೆ.ವಿ. ಅಕ್ಷರ, ಡಿ.ಆರ್. ನಾಗರಾಜ್ ಸೇರಿದಂತೆ ಕನ್ನಡ ಸಾರಸ್ವತ ಲೋಕದ ಹಲವು ದಿಗ್ಗಜರ ಪುಸ್ತಕಗಳನ್ನು ಪ್ರಕಟಿಸಿದ ಹೆಮ್ಮೆ ಅಕ್ಷರ ಪ್ರಕಾಶನದ್ದು. ಜೊತೆಗೆ ರಂಗ ಚಳುವಳಿಯನ್ನು ಹುಟ್ಟುಹಾಕುವ ಮೂಲಕ ರಂಗಭೂಮಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಸಂಚಲನ ಮೂಡಿಸಿದ ಕೆ.ವಿ. ಸುಬ್ಬಣ್ಣ ಅವರ ಹೆಗ್ಗೋಡಿನ ನೀನಾಸಂ (ನೀಲಕಂಠೇಶ್ವರ ನಾಟ್ಯ ಸೇವಾ ಸಂಘ) ಮತ್ತು ಅಕ್ಷರ ಪ್ರಕಾಶನಗಳು ಇಂದಿಗೂ ತಮ್ಮ ಪ್ರಯೋಗಶೀಲತೆ, ಸಮಕಾಲೀನ ಸ್ಪಂದನೆ ಮತ್ತು ವಿಶಿಷ್ಟ ಆಲೋಚನೆಗಳ ಮೂಲಕ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ತನ್ನದೇ ಆದ ಸ್ಥಾನವನ್ನು ಕಾಯ್ದುಕೊಂಡು ಬಂದಿವೆ. 65 ವಸಂತಗಳಿಂದಲೂ ಇಂತಹ ಅಪೂರ್ವ ಸಾಧನೆ ಮಾಡುತ್ತಾ ಬರುತ್ತಿರುವ ಅಕ್ಷರ ಪ್ರಕಾಶನವನ್ನು ಹೊರನಾಡ ಕನ್ನಡಿಗರ ಪ್ರತಿನಿಧಿಯಂತೆ ಕನ್ನಡ ಪರ ಕೆಲಸಗಳನ್ನು ಮಾಡುತ್ತಾ ಬಂದಿರುವ 75 ವರ್ಷಗಳಿಗೆ ಕಾಲಿಟ್ಟಿರುವ ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಕಳೆದ ಫೆಬ್ರವರಿ 26ರಂದು ನಡೆದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಕಾರಣಾಂತರಗಳಿಂದ ಬರಲಾಗದಿದ್ದ ಸಂಸ್ಥೆಯ ಆಶಯ, ಪ್ರಸ್ತುತ ಕಾರ್ಯಯೋಜನೆಗಳ ಬಗ್ಗೆ ರಂಗನಿರ್ದೇಶಕ, ಸಾಹಿತಿ ಮತ್ತು ಪ್ರಕಾಶಕ ಕೆ.ವಿ. ಅಕ್ಷರ ಅವರ ಮಗ ಶ್ರೀ ಶಿಶಿರ ಕೆ.ವಿ. ಅವರು ದಿನಾಂಕ ಅಕ್ಟೋಬರ್ 29 ಮತ್ತು 30 ರಂದು ನಡೆದ ಮಲೆನಾಡು ಸಾಂಸ್ಕೃತಿಕ ಉತ್ಸವ ಸಂದರ್ಭದಲ್ಲಿ ಬಂದು ಡಾ. ಶಿವರಾಮ ಕಾರಂತ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀ ಶಿಶಿರರವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆ ಅರ್ಪಿಸಿದರು. ಪ್ರಶಸ್ತಿ ಪುರಸ್ಕೃತ ಅಕ್ಷರ ಪ್ರಕಾಶನ ಸಂಸ್ಥೆಗೆ ದೆಹಲಿ ಕರ್ನಾಟಕ ಸಂಘ ಹಾಗೂ ಹೊರನಾಡ ಕನ್ನಡಿಗರ ಅಭಿನಂದನೆಗಳು. ಅಕ್ಷರ ಪ್ರಕಾಶನ ಕುರಿತ ಪರಿಚಯವನ್ನು ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಮಲೆನಾಡು ಸಾಂಸ್ಕೃತಿಕ ಉತ್ಸವದ ಸಮಾರೋಪ ಸಮಾರಂಭದ ಸಂದರ್ಭದಲ್ಲಿ ಮಾಡಿಕೊಟ್ಟರು.

# ಭಾರತ ಸ್ವಾತಂತ್ರ ಹೋರಾಟದ ಸತ್ಯ ಕಥೆ ಆಧಾರಿತ
# 'ಏಸೂರ ಕೊಟ್ಟರೂ ಈಸೂರ ಕೊಡೆವು'

ಭಾರತವು ತನ್ನ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುವ ಹೊತ್ತಿಗೆ ದೆಹಲಿ ಕರ್ನಾಟಕ ಸಂಘವೂ 75 ವರ್ಷದ ಹುಟ್ಟು ಹಬ್ಬವನ್ನು ಆಚರಿಸುತ್ತಿದೆ. ಇದರ ಅಂಗವಾಗಿ ದಿನಾಂಕ ಅಕ್ಟೋಬರ್ 30 ರಂದು ಮಲೆನಾಡು ಸಾಂಸ್ಕೃತಿಕ ಉತ್ಸವ ಸಂದರ್ಭದಲ್ಲಿ ಸಂಘದಲ್ಲಿ ಶಿವಮೊಗ್ಗದ ಹೊಂಗಿರಣ ತಂಡವು 'ಏಸೂರ ಕೊಟ್ಟರೂ ಈಸೂರ ಕೊಡೆವು' ನಾಟಕವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿತು.

ರಂಗಭೂಮಿಯನ್ನೇ ಉಸಿರಾಗಿಸಿಕೊಂಡಿರುವ ಡಾ. ಸಾಸ್ವೆಹಳ್ಳಿ ಸತೀಶರು ರಚಿಸಿ ನಿರ್ದೇಶಿಸಿದ ಈ ನಾಟಕವು ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ನಡೆದ ವಿಶಿಷ್ಟ ರಾಷ್ಟ್ರೀಯ ಹೋರಾಟವೊಂದನ್ನು ಕುಳಿತವರು ಉಸಿರು ಬಿಗಿ ಹಿಡಿದು ನೋಡುವಂತೆ ಮಾಡಿತು. 1947ಕ್ಕೂ ಪೂರ್ವದಲ್ಲಿ ಅನೇಕ ಪ್ರಾಂತೀಯ ಹೋರಾಟಗಳು ನಡೆದಿದ್ದು ಅವುಗಳ ಸಂಖ್ಯೆಯು ನೂರಕ್ಕೂ ಹೆಚ್ಚು ಎಂದು ಈ ಕುರಿತು ಸಂಶೋಧನೆ ನಡೆಸಿರುವ ಡಾ. ಕ್ಯಾಥಲೀನ್ ಗಾಫ್ ಹೇಳಿದ್ದಾರೆ. ಪ್ರಾಂತೀಯ ಹೋರಾಟಗಳಲ್ಲಿ ಭೂಸಂಬಂಧವುಳ್ಳ ಎಲ್ಲ ವರ್ಗದ ರೈತರು, ಭೂಮಿ ಕಳೆದುಕೊಂಡ ಪಾಳೆಯಗಾರರು, ಜಮೀನ್ದಾರರು, ಮೂಲೆಗುಂಪಾದ ರಾಜ ವಂಶಜರು, ದಿವಾಳಿ ಎದ್ದ ರೈತರು, ಸಾಂಪ್ರದಾಯಿಕ ಕೈ ಕಸಬುಗಳನ್ನು ಕಳೆದುಕೊಂಡವರು, ಬಿಟ್ಟಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರು, ಧರ್ಮ ಗುರುಗಳು ಹಾಗೂ ಆದಿವಾಸಿ ಮುಖಂಡರು ಭಾಗವಹಿಸಿದ್ದಾರೆ. ರಾಷ್ಟ್ರೀಯ ಪ್ರಜ್ಞೆಯು ಇನ್ನೂ ಗಟ್ಟಿಯಾಗಿ ಹುಟ್ಟಿಕೊಂಡಿರದ 18ನೇ ಶತಮಾನದ ಆ ಪ್ರಾಂತೀಯ ಹೋರಾಟಗಳಿಗಿಂತ 1942ರಲ್ಲಿ ನಡೆದ ಈಸೂರು ಹೋರಾಟ ಭಿನ್ನವಾದುದು. ಇದು ನಡೆಯುವ ಹೊತ್ತಿಗೆ ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಹೋರಾಟಕ್ಕೆ ರಾಷ್ಟ್ರೀಯ ಆಯಾಮ ದೊರೆತಿತ್ತು. ಇದರಿಂದಾಗಿ ಇತರ ಪ್ರಾಂತೀಯ ಹೋರಾಟಗಳಲ್ಲಿ ಕಂಡು ಬರುತ್ತಿದ್ದ ಗಾಢವಾದ ಸ್ಥಳೀಯ ಸಮಸ್ಯೆಗಳು 'ಏಸೂರ ಕೊಟ್ಟರೂ ಈಸೂರ ಕೊಡೆವು' ನಾಟಕದಲ್ಲಿ ಕಂಡು ಬರುವುದಿಲ್ಲ.

ಶಿವಮೊಗ್ಗ ಜಿಲ್ಲೆಯ ಪುಟ್ಟ ಊರಾದ ಈಸೂರಿನಲ್ಲಿ ನಡೆದ ಹೋರಾಟವು ಮಹಾತ್ಮ ಗಾಂಧಿಯವರ 'ಭಾರತ ಬಿಟ್ಟು ತೊಲಗಿ' ಘೋಷಣೆಯಿಂದ ನೇರವಾಗಿ ಪ್ರಭಾವಿತವಾಗಿದೆ. ಈಸೂರಿನ ಸುಮಾರು 200 ಜನರು ಗಾಂಧೀಜಿಯ ಕರೆಗೆ ಓಗೊಟ್ಟು ತಾಳ್ಮೆಯಿಂದಲೇ ಸ್ವಾತಂತ್ರ್ಯ ಚಳವಳಿ ಶುರು ಮಾಡಿದ್ದರು. ಸರ್ಕಾರಕ್ಕೆ ಕೊಡಬೇಕಾಗಿದ್ದ ತೆರಿಗೆಯನ್ನು ಕೊಡದೆ ಅಸಹಕಾರ ತೋರಿದರು. ಸರ್ಕಾರಿ ಅಧಿಕಾರಿಗಳಿಗೆ, ಶಾಲೆಗಳಿಗೆ, ಕಚೇರಿಗಳಿಗೆ ಧಿಕ್ಕಾರ ಘೋಷಿಸಿದರು. 1942 ಸೆಪ್ಟಂಬರ್ 25ರಂದು ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿ ಈಸೂರನ್ನು 'ಸ್ವತಂತ್ರ ಹಳ್ಳಿ' ಎಂದು ಸಾರಿದರು. ಮಕ್ಕಳನ್ನು ಮುಂದಿಟ್ಟುಕೊಂಡು ತಮ್ಮದೇ ಆದ ಸರ್ಕಾರ ರಚಿಸಿಕೊಂಡರು. ಅಧಿಕಾರಿಗಳೂ ಊರೊಳಗೆ ಪ್ರವೇಶಿಸಬೇಕಾದರೆ ಗಾಂಧೀ ಟೋಪಿ ಹಾಕಬೇಕೆಂಬ ಅವರ ಒತ್ತಾಯವು ಗಾಂಧೀ ಮಾದರಿಯ ಹೋರಾಟಕ್ಕೆ ಅತ್ಯುತ್ತಮವಾದ ಸಂಕೇತವಾಗಿದೆ. ಆದರೆ ಈ ಸ್ವಾತಂತ್ರ್ಯ ಅವರಿಗೆ ದಕ್ಕಿದ್ದು ಕೇವಲ ಮೂರು ದಿವಸ. 1942 ಸೆಪ್ಟಂಬರ್ 28ರಂದು ಪೋಲೀಸ್ ಅಧಿಕಾರಿಗಳೊಡನೆ ನಡೆದ ಸಂಘರ್ಷದಲ್ಲಿ ಗ್ರಾಮಸ್ಥರು ಅಮಲ್ದಾರ ಚನ್ನಕೃಷ್ಣಪ್ಪ ಮತ್ತು ಪೋಲೀಸ್ ಅಧಿಕಾರಿ ಕೆಂಚೇಗೌಡನನ್ನು ಸಾಯಿಸಿದರು. ಹೋರಾಟವು ಹಿಂಸೆಗೆ ತಿರುಗುತ್ತಲೇ ಸಹಜವಾಗಿ ಹಿನ್ನಡೆಯನ್ನು ಕಂಡಿತು. ಸರ್ಕಾರದ ವಿರುದ್ಧ ಬಂಡೆದ್ದವರೆಂದು 41 ಮಂದಿಯನ್ನು ಬಂಧಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಯಿತು. ತ್ವರಿತವಾಗಿ ನಡೆದ ವಿಚಾರಣೆಯಲ್ಲಿ ನ್ಯಾಯಾಧೀಶರು 1943 ಜನವರಿ 9ರಂದು, ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಬಿ. ಹಾಲಪ್ಪ ಮತ್ತು ಜಿ. ಶಂಕರಪ್ಪ ಇವರಿಗೆ ಮರಣದಂಡನೆ ವಿಧಿಸಿದರು. ಚಾರಿತ್ರಿಕವಾಗಿ ಈ ಐವರನ್ನೂ ಬೇರೆ ಬೇರೆ ದಿನಗಳಲ್ಲಿ ಗಲ್ಲಿಗೇರಿಸಲಾಯಿತಾದರೂ ನಾಟಕದಲ್ಲಿ ಅವರೆಲ್ಲ ಒಂದೇ ದಿನ ಗಲ್ಲಿಗೇರಿಸುವಂತೆ ಕೇಳುವುದನ್ನು ಪರಿಣಾಮಕಾರಿಯಾಗಿ ತೋರಿಸಲಾಗಿದೆ.



40ಜನ ಕಲಾವಿದರಿದ್ದ ಹೊಂಗಿರಣ ತಂಡವು ಇತಿಹಾಸದ ಘಟನೆಗಳನ್ನು ಬಹಳ ಅಚ್ಚುಕಟ್ಟಾಗಿ ರಂಗದಲ್ಲಿ ತೋರಿಸಿತು. ನಿರ್ದೇಶಕ ಡಾ.ಸಾಸ್ವೆಹಳ್ಳಿ ಸತೀಶರು ಇಡೀ ಊರನ್ನೇ ನಾಯಕ ಸ್ಥಾನದಲ್ಲಿರಿಸಿ, ಯಾವುದೇ ಒಂದು ಪಾತ್ರ ಹೆಚ್ಚು ಬೆಳೆಯದ ಹಾಗೆ ನೋಡಿಕೊಂಡಿದ್ದಾರೆ. ಹಾಗಾಗಿಯೇ ನಾಟಕ ಮುಗಿಯುವ ಹೊತ್ತಿಗೆ ಪ್ರೇಕ್ಷಕರೆಲ್ಲ 'ಏಸೂರ ಕೊಟ್ಟರೂ ಈಸೂರ ಕೊಡೆವು' ಅಂತ ಘೋಷಣೆ ಕೂಗುವಂತಾಯಿತು.

ಶಿವಮೊಗ್ಗ ಹೊಂಗಿರಣ ತಂಡದ ಎಲ್ಲಾ ಕಲಾವಿದರಿಗೂ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಮನೋಜ್ಞ ನಾಟಕ ಪ್ರದರ್ಶನ ನೀಡಿದಕ್ಕೆ ಅಭಿನಂದನೆಗಳು.

**ಡಾ. ಪುರುಷೋತ್ತಮ ಬಿಳಿಮಲೆ**

## ಅಭಿಮತ ಓದುಗರ ಅನಿಸಿಕೆ




I wish to congratulate Abhimatha for completing 33 years. Front page cover showing earlier issues very nice. I appreciate DKS for honouring Dr.M.Srinivas, Director, AIIMS which he richly deserve.

This month Abhimatha gives festival look covering all Ganesh Chaturthi Poojas. Celebrating Dr.Vishwesharayya birth anniversary with kids was nice.

I always enjoy reading Chandrashekhar's Editorial column which is simple covering all subjects. Wish to see Abhimatha celebrating Golden Jubilee Issue.

**Mrs. Uma Rao**

# ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ವತಿಯಿಂದ
## ಸರ್. ಮಿರ್ಜಾ ಇಸ್ಮಾಯಿಲ್‌ರವರ ಜನ್ಮ ದಿನಾಚರಣೆ

ಕನ್ನಡ ಸಾಹಿತ್ಯ ಪರಿಷತ್ತಿನ ಪೋಷಕರಾಗಿದ್ದ ಹಾಗೂ ಪರಿಷತ್ತಿನ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದ, ಭಾರತ ದೇಶ ಕಂಡ ಮೇಧಾವಿ ಆಡಳಿತಗಾರ ಸರ್ ಮಿರ್ಜಾ ಇಸ್ಮಾಯಿಲ್ ರವರ 137 ನೇ ಜನ್ಮ ದಿನಾಚರಣೆಯನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯ ಭವನದಲ್ಲಿ ಅಕ್ಟೋಬರ್ 24 ರ ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.




ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವಿಚಾರ ಮಂಡನೆ ಮಾಡಿದ ಪ್ರೊ. ಸಖಾರಾಮ್ ಉಪ್ಪೂರು ಅವರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ ಪರಮಾಪ್ತರು ಮತ್ತು ದಿವಾನರೂ ಆಗಿದ್ದ ಸರ್. ಮಿರ್ಜಾ ಇಸ್ಮಾಯಿಲ್‌ರವರು ಮೈಸೂರು, ಜೈಪುರ ಮತ್ತು ಹೈದರಾಬಾದಿನ ನಿಜಾಮರ ಸಂಸ್ಥಾನಗಳಲ್ಲಿಯೂ ನುರಿತ ಮತ್ತು ಅನುಭವಿ ಆಡಳಿತಗಾರರಾಗಿ ಅಪಾರ ಕೊಡುಗೆ ನೀಡಿದ್ದಾರೆ. ಅಲ್ಲದೆ ಸಂಸ್ಕೃತ–ಕನ್ನಡ ಪ್ರೇಮಿ, ಅಭಿವೃದ್ಧಿಯ ಹರಿಕಾರ, ಹೊಸತನ ಕನಸುಗಾರ ಮಾನವೀಯ ಜೀವಿಯಾಗಿದ್ದರು ಎಂದು ಅಭಿಪ್ರಾಯಪಟ್ಟರು.

ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್ ಅವರ ಪೂರ್ಣ ಹೆಸರು ಸರ್ ಆಮೀನ್ ಉಲ್ ಮುಲ್ಕ್ ಮಿರ್ಜಾ ಮೊಹಮದ್ ಇಸ್ಮಾಯಿಲ್. ಇವರ ಅಜ್ಜ ಅಲಿಯಾಸ್ಕರ್ ಮೂಲತಃ ಪರ್ಷಿಯಾದವರು. ವ್ಯಾಪಾರ ಮಾಡುತ್ತಾ ಬಂದು ಬೆಂಗಳೂರಿನಲ್ಲಿ ನೆಲೆ ಕಂಡುಕೊಂಡಿದ್ದರು. ಅಲಿಯಾಸ್ಕರ್ ಅವರ ಮಗ ಆಗಾ ಖಾನ್ ಅವರ ಪುತ್ರನಾಗಿ 1883 ಅಕ್ಟೋಬರ್ 24 ರಂದು ಜನಿಸಿದ ಮಿರ್ಜಾ ಇಸ್ಮಾಯಿಲ್ ಶಿಕ್ಷಣಕ್ಕಾಗಿ ಬೆಂಗಳೂರಿನ ಸೇಂಟ್ ಫ್ಯಾಟ್ರಿಕ್ ಸ್ಕೂಲ್ ಸೇರಿಕೊಳ್ಳುತ್ತಾರೆ. ಇದೇ ವೇಳೆ ನಾಲ್ವಡಿ ಕೃಷ್ಣರಾಜ ಒಡೆಯರ್ ಶಿಕ್ಷಣಕ್ಕಾಗಿ ವಿಶೇಷ ರಾಯಲ್ ಸ್ಕೂಲ್ ಸ್ಥಾಪನೆ ಆಗುತ್ತದೆ. ಈ ಸ್ಕೂಲಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೊತೆಗೆ ವಿದ್ಯಾಭ್ಯಾಸ ಮಾಡುವ ಅವಕಾಶ ಮಿರ್ಜಾ ಇಸ್ಮಾಯಿಲ್ ಅವರಿಗೂ ಒದಗಿತು. ಹಾಗಾಗಿ ಬಾಲ್ಯದಿಂದಲೂ ಮಿರ್ಜಾ ಇಸ್ಮಾಯಿಲ್ ಅವರಿಗೆ ಒಡೆಯರ್ ಜೊತೆ ಒಡನಾಟ ಇತ್ತು. ಶಿಕ್ಷಣದ ಬಳಿಕ ಮಿರ್ಜಾ ಇಸ್ಮಾಯಿಲ್ ಅವರು 1904ರಲ್ಲಿ ಪೊಲೀಸ್ ಅಧೀಕ್ಷಕರಾಗಿ ಕೋಲಾರದಲ್ಲಿ ವೃತ್ತಿ ಜೀವನ ಆರಂಭಿಸುತ್ತಾರೆ. ವೃತ್ತಿ ಜೀವನದ ಆರಂಭದಲ್ಲಿಯೇ ವಿಶ್ವೇಶ್ವರಯ್ಯನವರ ಮಾರ್ಗದರ್ಶನ ಇಸ್ಮಾಯಿಲ್ ಅವರಿಗೆ ಸಿಗುತ್ತೆ. ಕೋಲಾರದಲ್ಲಿ ವೃತ್ತಿ ಆರಂಭಿಸಿದ್ದ ಇಸ್ಮಾಯಿಲ್ ಅವರನ್ನ ಕರೆಸಿಕೊಳ್ಳುವ ನಾಲ್ವಡಿ ಕೃಷ್ಣರಾಜ್ ಒಡೆಯರು ಹುಜುರ್ ಸೆಕ್ರೆಟರಿ ಹುದ್ದೆಯನ್ನ ಸೃಷ್ಟಿಸುತ್ತಾರೆ. ಅದಕ್ಕೆ ಇಸ್ಮಾಯಿಲ್ ಅವರನ್ನ ಆಯ್ಕೆ ಮಾಡಿಕೊಳ್ಳುತ್ತಾರೆ.

1926ರಿಂದ ಮಿರ್ಜಾ ಇಸ್ಮಾಯಿಲ್ ದಿವಾನ್‌ರಾಗಿ ಆಡಳಿತ ಆರಂಭಗೊಳ್ಳುತ್ತದೆ. ನಾಲ್ವಡಿ ಕೃಷ್ಣರಾಜ್ ಒಡೆಯರ್ ಮತ್ತು ಇಸ್ಮಾಯಿಲ್ ಅವರ ಅವಧಿಯನ್ನ ಮೈಸೂರು ಸಂಸ್ಥಾನದ ಸುವರ್ಣ ಯುಗ ಎಂದು ಇತಿಹಾಸಕಾರರು ಬಣ್ಣಿಸುತ್ತಾರೆ. ಕಾರಣ ಅವರು ಕೇವಲ ಆಡಳಿತ ವಿಷಯದಲ್ಲಿ ಮಾತ್ರ ಅಲ್ಲದೇ ನಗರದ ಸ್ವಚ್ಛತೆ, ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಬೆಳಗಿನ ಜಾವ ಕುದುರೆ ಏರಿ ಹೊರಟರೆ ಇಡೀ ನಗರದ ಪ್ರದಕ್ಷಿಣೆ ಹಾಕುತ್ತ ಜನರ ಸಮಸ್ಯೆಗಳನ್ನ ಆಲಿಸಿ ಪರಿಹಾರ ಸಹ ಒದಗಿಸುತ್ತಿದ್ದರು. ಮಿರ್ಜಾ ಇಸ್ಮಾಯಿಲ್ ಹೆಚ್‌ಎಎಲ್ ಗೆ ಫೌಂಡೇಶನ್ ಹಾಕಿದವರು, ಬೆಂಗಳೂರಿನ ಟೌನ್ ಹಾಲ್ ಡಿಸೈನ್ ಮಾಡಿದವರು, ಮಂಡ್ಯದ ಸಕ್ಕರೆ ಕಾರ್ಖಾನೆ ಕಟ್ಟಿದವರು. ಗ್ರಾಮೀಣ ಭಾಗಗಳಿಗೂ ಕರೆಂಟ್ ನೀಡಿದ ಬೆಳಕಿನ ಚೇತನ ಮಿರ್ಜಾ ಇಸ್ಮಾಯಿಲ್ ಎಂದರು.



15 ವರ್ಷ ದಿವಾನ್‌ರಾಗಿದ್ದ ಮಿರ್ಜಾ ಇಸ್ಮಾಯಿಲ್ ದೂರದೃಷ್ಟಿಯುಳ್ಳವರಾಗಿದ್ದರು. ಹಾಗಾಗಿ ನೀರಾವರಿ, ಕೈಗಾರಿಕೆ, ಮೂಲಭೂತ ಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಿದ್ರು. ಮಂಡ್ಯ, ಮಳವಳ್ಳಿ ಭಾಗದ ಒಂದು ಲಕ್ಷ ಸಾವಿರಕ್ಕೂ ಅಧಿಕ ಎಕರೆ ಕೃಷಿ ಭೂಮಿಯನ್ನ ನೀರಾವರಿಗೆ ಒಳಪಡಿಸಿದ್ದರು. ಇಸ್ಮಾಯಿಲ್ ಅವರ ಕಾಲದ ವೇಳೆ ಮೈಸೂರು ಸಂಸ್ಥಾನದಲ್ಲಿ 30 ಸಾವಿರ ಕೆರೆಗಳ ನಿರ್ಮಾಣ ಆಗಿದ್ದವು. ಬೆಂಗಳೂರಿನ ಸರ್ಕಾರಿ ಪಿಂಗಾಣಿ ಕಾರ್ಖಾನೆ, ಶಿವಮೊಗ್ಗದ ಸಕ್ಕರೆ ಫ್ಯಾಕ್ಟರಿ, ಭದ್ರಾವತಿಯ ಸಿಮೆಂಟ್ ಮತ್ತು ಕಾಗದದ ಫ್ಯಾಕ್ಟರಿ, ಬೆಂಕಿ ಪೊಟ್ಟಣ ಫ್ಯಾಕ್ಟರಿ, ಹೆಚ್‌ಎಎಲ್ ಇವೆಲ್ಲ ಇಸ್ಮಾಯಿಲ್ ಅವರ ಕೊಡುಗೆಗಳಾಗಿವೆ.




ಆ ಹೊತ್ತಿಗಾಗಲೇ ಖಾಸಗಿ ಒಡೆತನದಲ್ಲಿದ್ದ ರೈಲ್ವೇಯನ್ನ ಸರ್ಕಾರದ ಅಧೀನಕ್ಕೆ ಒಳಪಡಿಸಿದ್ದರು, ಶಿವಮೊಗ್ಗ, ತಾಳಗುಪ್ಪ ರೈಲ್ವೇ ಲೈನ್ ಹಾಕಿಸಿದ್ದರು. ಬೆಂಗಳೂರಿನ ಕಾವೇರಿ ನೀರು ಬರೋಕೆ ಕಾರಣವಾದ ತಿಪ್ಪಗೊಂಡನಹಳ್ಳಿ ಜಲಾಶಯ, ಅದನ್ನ ಕಟ್ಟಿಸಿದವರು ಇಸ್ಮಾಯಿಲ್ ಅವರೇ. ಬೆಂಗಳೂರು, ಮೈಸೂರು ಮೆಡಿಕಲ್ ಕಾಲೇಜು, ಬೆಂಗಳೂರಿಗೆ ಮೊದಲ ಬಾರಿಗೆ ಡಬಲ್ ಡೆಕ್ಕರ್ ಸಿಟಿ ಬಸ್ ತಂದಿದ್ದು ಸಹ ಇಸ್ಮಾಯಿಲ್ ಅವರ ಸಾಧನೆಗಳಾಗಿವೆ ಎಂದು ವಿವರಿಸಿದರು. ಹಾಗೆಯೇ ಸರ್ ಮಿರ್ಜಾ ಇಸ್ಮಾಯಿಲ್ ಬದುಕಿನ ಘಟನೆಗಳನ್ನು ಮೆಲುಕು ಹಾಕುತ್ತಾ ಕೆಳಗಿನ ಹಲವು ವಿಚಾರಗಳನ್ನು ಪ್ರೊ ಸಖಾರಾಮ ಉಪ್ಪೂರು ಅವರು ತಿಳಿಸಿದರು.

**ಭಾಷಾ ಪ್ರೇಮಿ ಮತ್ತು ಧರ್ಮ ಸಾಮರಸ್ಯ ತಂದವರು ಸರ್ ಮಿರ್ಜಾ ಇಸ್ಮಾಯಿಲ್ :** ಮಿರ್ಜಾ ಇಸ್ಮಾಯಿಲ್ ಮುಸ್ಲಿಂರಾದರೂ ಕನ್ನಡ ಮತ್ತು ಸಂಸ್ಕೃತ ಭಾಷಾ ಪ್ರೇಮಿ. ಅದೇ ಕಾರಣಕ್ಕೆ ರಾಜ್ಯದೆಲ್ಲೆಡೆ ಕನ್ನಡ ಭಾಷೆ ಕಲಿಕೆಯನ್ನ ಕಡ್ಡಾಯಗೊಳಿಸಿದ್ದರು. ಹಿಂದೂ, ಮುಸಲ್ಮಾನರು, ಕ್ರಿಶ್ಚಿಯನ್ ಎಲ್ಲರನ್ನ ಸಮನಾಗಿ ಕಂಡು ಧರ್ಮ ಸಾಮರಸ್ಯ ತಂದವರು ಸರ್. ಮಿರ್ಜಾ ಇಸ್ಮಾಯಿಲ್.

**ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ ಮಿರ್ಜಾ ಇಸ್ಮಾಯಿಲ್ ಅವರ ಕೊಡುಗೆ:** ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕಟ್ಟಡ ನಿರ್ಮಾಣಕ್ಕೆ ನೀಡಿದ ನಿವೇಶನವು ಒಂದು ಬಯಲುಪ್ರದೇಶ. ಎದುರುಗಡೆ ಹಾರ್ಡಿಂಜ್ ರಸ್ತೆ. (ಈಗ ಪಂಪ ಮಹಾಕವಿ ರಸ್ತೆಯಾಗಿದೆ) ಅಕ್ಕಪಕ್ಕ 2 ಹಾಗೂ 3ನೇ ಮುಖ್ಯರಸ್ತೆ. ಹಿಂಭಾಗದಲ್ಲಿ ಎರಡು ಖಾಸಗಿ ಮನೆಗಳು. ಈ ಬಯಲಿನ ಅಂಚಿನಲ್ಲಿ ಆ ಎರಡೂ ಮನೆಗಳ ನಡುಭಾಗದಲ್ಲಿ ಮೂರು ದೊಡ್ಡ ಹೊಂಗೆಮರಗಳು. ಸಂಜೆಯ ಸೂರ್ಯನ ಬಿಸಿಲನ್ನು ತಡೆದು ಬಯಲಿಗೆ ನೆರಳೀಯುತ್ತಿದ್ದವು. ಭಾರತ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಎಲ್ಲ ಸಭೆಗಳೂ ಈ ಬಯಲಿನಲ್ಲಿ ನಡೆಯುತ್ತಿದ್ದವು. ಜನರು ಅದನ್ನು ಗಾಂಧೀಮೈದಾನ ಎಂದು ಕರೆಯುತ್ತಿದ್ದರು.

ಕೃಷ್ಣರಾಜ ಪರಿಷನ್ಮಂದಿರ ನಿರ್ಮಾಣವಾದಾಗ ಈಗಿನ ಸಭಾ ಮಂದಿರಕ್ಕೆ ಬದಲಾಗಿ ಎರಡು ಕೋಟೆಗಳನ್ನು ಕಟ್ಟಲಾಗುತ್ತಿತ್ತು. ಆ ಕಟ್ಟಡ ಏಳುವಾಗ ಆಗಾಗ ಬಂದು ನೋಡುತ್ತಿದ್ದ ಮಿರ್ಜಾ ಸಾಹೇಬರು ತಮ್ಮ ಗುರುಗಳಾದ ವೆಂಕಟನಾರಣಪ್ಪ ಅವರನ್ನು ಕಂಡು 'ನಿಮಗೆ ಸಭೆ ಸಮಾರಂಭಗಳಿಗಾಗಿ ಒಂದು ಹಾಲ್ ಬೇಡವೇ' ಈ ಭಾಗವನ್ನು ಎರಡು ರೂಮುಗಳಾಗಿ ಒಡೆಯಬೇಡಿ. ಒಂದು ಹಾಲ್ ಮಾಡಿಕೊಳ್ಳಿ ಎಂದು ಬೋಧನೆ ಮಾಡಿ ಹಾಲ್ ವ್ಯವಸ್ಥೆ ಮಾಡಿದರು. ಅವರ ವಿವೇಕ ಹಾಗೂ





ದೂರದೃಷ್ಟಿಯಿಂದ ಮಾಡಿದ ಈ ನಿರ್ಧಾರ ಪರಿಷತ್ತಿಗೆ ಅನುಕೂಲಕರವಾಯಿತು. ಕಾಲಕಾಲಕ್ಕೆ ಮೈಸೂರು ಸಂಸ್ಥಾನದಿಂದ ಧನಸಹಾಯ ತರಿಸಲು ಅವರು ಕಾರಣರಾದರು.

**ದಿವಾನ್ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದ ಮಿರ್ಜಾ ಇಸ್ಮಾಯಿಲ್:** ಇಷ್ಟೆಲ್ಲ ಆಡಳಿತದಲ್ಲಿ ಸುಧಾರಣೆ ತಂದಿದ್ದ ಇಸ್ಮಾಯಿಲ್ ಅವರ 15 ವರ್ಷದ ದಿವಾನ್‌ರಾಗಿ ಸೇವೆ ಸಲ್ಲಿಸಿದ ಹಾದಿ ಸುಗಮವಾಗಿರಲಿಲ್ಲ. ಕೆಲವೊಮ್ಮೆ ಜಾತಿ ಹೆಸರು ಪ್ರಸ್ತಾಪ ಆದಾಗ ದಿವಾನ್ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದರಂತೆ. ಆದರೆ ನಾಲ್ವಡಿ ಕೃಷ್ಣರಾಜ್ ಒಡೆಯರ್ ನಮಗೆ ನೀವೇ ಬೇಕೆಂದಾಗ ಸೇವೆ ಮುಂದುವರಿಸಿದ್ರು. 1940ರಲ್ಲಿ ನಾಲ್ವಡಿ ಕೃಷ್ಣರಾಜ್ ಒಡೆಯರ್ ಕಾಲವಾದ ನಂತರವೇ ಇಸ್ಮಾಯಿಲ್ ಅವರು ದಿವಾನಗಿರಿಯಿಂದ ಕೆಳಗೆ ಇಳಿಯುತ್ತಾರೆ. ಆ ನಂತರ ಜೈಪುರದ ದಿವಾನರಾಗುತ್ತಾರೆ. ಮತ್ತೆ ಹೈದಾರಾಬಾದ್ ನಲ್ಲಿ ನಿಜಾಮರ ಸಂಸ್ಥಾನದಲ್ಲಿಯೂ ದಿವಾನ ಪಟ್ಟವನ್ನ ಅಲಂಕರಿಸುತಾರೆ. 1954ರಲ್ಲಿ ಮೈ ಪಬ್ಲಿಕ್ ಲೈಫ್ ಅನ್ನೋ ಆತ್ಮಕಥನ ಬರೀತಾರೆ.

**ಮಿರ್ಜಾ ಇಸ್ಮಾಯಿಲ್ ಅವರನ್ನ ಸಂಪರ್ಕಿಸಿದ್ದ ಮೊಹಮ್ಮದ್ ಅಲಿ ಜಿನ್ನಾ :** ಪಾಕಿಸ್ತಾನ ಮತ್ತು ಭಾರತ ಇಬ್ಭಾಗವಾದಾಗ ಮೊಹಮ್ಮದ್ ಅಲಿ ಜಿನ್ನಾ, ಮಿರ್ಜಾ ಇಸ್ಮಾಯಿಲ್ ಅವರನ್ನ ಸಂಪರ್ಕಿಸ್ತಾರೆ. ಅಲ್ಲಿ ದೊಡ್ಡ ಹುದ್ದೆ ನೀಡ್ತಿವಿ ಬನ್ನಿ ಅಂತ ಪಾಕಿಸ್ತಾನಕ್ಕೆ ಆಹ್ವಾನಿಸುತ್ತಾರೆ. ಆದ್ರೆ ದೇಶ ವಿಭಜನೆಯನ್ನ ವಿರೋಧಿಸಿದ್ದ ಮಿರ್ಜಾ ಇಸ್ಮಾಯಿಲ್ ಅವರು ಜಿನ್ನಾ, ನೀಡಿದ ಆಹ್ವಾನವನ್ನು ತಿರಸ್ಕರಿಸಿದ್ದರು. ಸ್ವಾತಂತ್ರ ಹೋರಾಟದ ವೇಳೆ ಮಹಾತ್ಮಾ ಗಾಂಧೀಜಿ ಅವರ ತತ್ವಗಳಿಂದ ಇಸ್ಮಾಯಿಲ್ ಪ್ರೇರಿತರಾಗಿದ್ದರು. ಇಂತಹ ಮಹಾನ್ ಆಡಳಿತಗಾರ ಮತ್ತು ದೇಶಭಕ್ತನ ಕುರಿತು ಮಾತನಾಡಲು ಅವಕಾಶ ದೊರೆಕಿದ್ದುದಕ್ಕಾಗಿ ಸಂತೋಷವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗೆ ಪ್ರೊ. ಸಖಾರಾಮರವರು ಮೆಚ್ಚುಗೆ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರೇಣುಕುಮಾರ್ ಅವರು ಮೈಸೂರು ಮಹಾರಾಜರು ತೆಗೆದುಕೊಂಡ ಅಭಿವೃದ್ಧಿ ಪರ ಕ್ರಮಗಳಿಂದಾಗಿ ಇಡೀ ದೇಶದಲ್ಲಿಯೇ ಮೈಸೂರು ಮಾದರಿಯಾಗಿದ್ದು, ಇದರಿಂದಾಗಿಯೇ ಇಂದಿಗೂ ಜನಮನದಲ್ಲಿ ಮೈಸೂರು ಮಹಾರಾಜರ ಬಗೆಗೆ ಉತ್ಕಟ ಗೌರವ ಭಾವನೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕನ್ನಡಿಗರಾದ, ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಎಸ್. ನರಸಿಂಹ ಮೂರ್ತಿ, ಶ್ರೀ ಮಹಮದ್ ಇಸ್ಮಾಯಿಲ್ ಮೊದಲಾದವರು ಮಾತನಾಡಿ ಮಿರ್ಜಾ ಇಸ್ಮಾಯಿಲ್ ಅವರ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಈಗಾಗಲೇ ನಮ್ಮ ಘಟಕದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರಾದ ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮ ಜಯಂತಿ ಆಚರಿಸಲಾಗಿದ್ದು ಇದೀಗ ಪರಿಷತ್ತಿನ ಬೆಳವಣಿಗೆಗೆ ಶ್ರಮ ವಹಿಸಿ ದುಡಿದ ಮತ್ತೊಬ್ಬ ಸಾಧಕರೂ, ದಿವಾನರೂ ಆಗಿದ್ದ ಸರ್. ಎಂ. ಮಿರ್ಜಾ ಇಸ್ಮಾಯಿಲ್ ಅವರ ಜನ್ಮ ದಿನಾಚರಣೆ ಮಾಡುತ್ತಿದ್ದೇವೆ. ಈ ಮೂಲಕ ನಮ್ಮ ನಾಡಿನ ಮಹಾನ್ ಪುರುಷರ ಕುರಿತ ವಿಚಾರಧಾರೆಗಳನ್ನು ಹೊರನಾಡಿನಲ್ಲಿರುವ ಕನ್ನಡಿಗರು ಮತ್ತು ಕನ್ನಡೇತರರಿಗೂ ತಲುಪಿಸುವಂತಹ ಕೆಲಸವನ್ನು ನಮ್ಮ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ನಿರಂತರವಾಗಿ ಮಾಡುತ್ತಿದೆ ಎಂದರು. ಇದರ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಕಲೆ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಕನ್ನಡತನವನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡಿ, ಅದರ ಪ್ರಭಾವ ರಾಷ್ಟ್ರ ಮಟ್ಟದಲ್ಲಿ ಬೀರುವಂತೆ ಮಾಡುವ ಉದ್ದೇಶ ಹೊಂದಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ದೆಹಲಿಯ ಕನ್ನಡ ಮಕ್ಕಳಾದ ಕುಮಾರಿ ಜೈನಾಬ್, ಕುಮಾರಿ ನಂದಿತಾ ಉಭಾಳೆ, ಹರ್ಷಿತ ಉಭಾಳೆ, ಕುಮಾರಿ ನೂತನ ಕೈಕಾಡೆ, ಮಾಸ್ಟರ್ ಮಹಮದ್ ಸಾಹಿಲ್ ಕನ್ನಡ ಪದ್ಯ ವಾಚನ ಮಾಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಗಣ್ಯರು ಹಾಗೂ ಸಭಿಕರನ್ನು ಸ್ವಾಗತಿಸಲು ಗೌರವ ಕೋಶಾಧ್ಯಕ್ಷ ಶ್ರೀ ಸಂತೋಷ್ ಜೆ ಅವರು ನೆರವಾದರು. ಪರಿಷತ್ತಿನ ಗೌರವ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಎನ್.ಪಿ. ಅವರು ಕಾರ್ಯಕ್ರಮದ ನಿರೂಪಣೆ ಮಾಡಿ, ಕೊನೆಗೆ ಎಲ್ಲರನ್ನು ವಂದಿಸಿದರು. ಈ ವರ್ಷ ದೀಪಾವಳಿ ಹಬ್ಬದ ದಿನವೂ ಸಹ ಕನ್ನಡದ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

**ಶ್ರೀಮತಿ ಹೇಮಶ್ರೀ ಚಂದ್ರಶೇಖರ್**



**ಅಕಾಲಿಕ ಮರಣಕ್ಕೆ ತುತ್ತಾದ ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ ವಿಜಯ್ ಕುಮಾರ್ ಅವರ ಕುಟುಂಬಕ್ಕೆ ಸಂಘದ ವತಿಯಿಂದ ಅಧ್ಯಕ್ಷರು ಧನ ಸಹಾಯ ನೀಡುತ್ತಿರುವುದು.**

# "ಬೇಂದ್ರೆ ಅವರ ಕವನಗಳಲ್ಲಿ ಪಂಚಭೂತಗಳಲ್ಲಿ ಒಂದಾದ ಭೂಮಿಯ ಪರಿಕಲ್ಪನೆ"

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಆಧುನಿಕ ಕನ್ನಡ ಸಾಹಿತ್ಯದ ಅತ್ಯಂತ ಮಹತ್ವದ ಕವಿಗಳಲ್ಲೊಬ್ಬರು. ಇವರು 1896 ಜನವರಿ 31 ರಂದು ಧಾರವಾಡದಲ್ಲಿ ಜನಿಸಿದರು. ಪುಣೆಯ ಫರ್ಗ್ಯೂಸನ ಕಾಲೇಜಿನಿಂದ ಬಿ.ಎ. ವ್ಯಾಸಂಗ ಮಾಡಿ, 1934 ರಲ್ಲಿ ಎಂ.ಎ ಪದವಿಯನ್ನು ಪಡೆದರು. ಇವರು ಹೈಸ್ಕೂಲಿನಲ್ಲಿ, ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ನಡೆಸಿದ ಅನಂತರ ಆಕಾಶವಾಣಿಯಲ್ಲಿ ಕಾರ್ಯಕ್ರಮ ಸಲಹೆಗಾರ, ನಿರ್ಮಾಪಕರಾಗಿ ಕೆಲಸ ಮಾಡಿದರು. ವರಕವಿ, ಮಾಂತ್ರಿಕಕವಿ, ಕನ್ನಡ ನುಡಿಯ ಗಾರುಡಿಗ, ಹೊಸಗನ್ನಡ 'ಭಾವಗೀತ'ದ ಮೂಲ ಪ್ರವರ್ತಕರಲ್ಲೊಬ್ಬರೆಂದು ಖ್ಯಾತರಾಗಿ ಕನ್ನಡ ಜನಮನವನ್ನು ಗೆದ್ದವರು ಬೇಂದ್ರೆ. ಅಂಬಿಕಾತನಯದತ್ತ ಎಂಬುದು ಇವರ ಕಾವ್ಯನಾಮ. ಜನ ಸಾಮಾನ್ಯರ ಭಾಷೆಯಲ್ಲಿ ಕನ್ನಡ ಕಾವ್ಯ ಸಂಪತ್ತನ್ನು ಬೆಳೆಸಿದ ಕವಿ ಅಂಬಿಕಾತನಯದತ್ತರ ಸಾಹಿತ್ಯ ಸೃಷ್ಟಿ ಬೆರಗುಗೊಳಿಸುವಷ್ಟು ವಿಪುಲವಾಗಿದೆ. ಕಾವ್ಯ, ನಾಟಕ, ವಿಮರ್ಶೆ, ಕಥೆ, ಅನುವಾದ, ಭಾಷಣ ಈ ಪ್ರಕಾರಗಳಲ್ಲಿ ಅವರ ಸಾಹಿತ್ಯ ಕೃಷಿ ನಡೆದಿದೆ. 27 ಕವನ ಸಂಕಲನಗಳಲ್ಲಿ ಬೇಂದ್ರೆ ಅವರ ಕಾವ್ಯ ಅರಳಿದೆ. ಅವುಗಳಲ್ಲಿ ಗರಿ, ಮೂರ್ತಿ ಮತ್ತು ಕಾಮಕಸ್ತೂರಿ, ಸಖೀಗೀತ, ನಾದಲೀಲೆ, ಹಾಡು-ಪಾಡು, ಉಯ್ಯಾಲೆ, ಗಂಗಾವತರಣ, ಅರಳು-ಮರಳು ಬಾಹತ್ತರ, ಒಲವೆ-ಬದುಕು, ಮತ್ತೆ ಶ್ರಾವಣ ಬಂತು, ನಾಕುತಂತಿ ಸಂಕಲನಗಳನ್ನು ಬರೆದಿದ್ದಾರೆ. ಪ್ರಕೃತಿ-ಪ್ರೇಮ, ಕುಟುಂಬ ಜೀವನದ ಸುಖದುಃಖಗಳು, ಆಧ್ಯಾತ್ಮ, ನಾಡಾಭಿಮಾನ, ಸಾಮಾಜಿಕ ವಿಷಯತೆ, ದಾಸ್ಯದಾರಿದ್ರ್ಯ, ಅನ್ಯಾಯ ಇವೇ ಮೊದಲಾದ ಸಂಗತಿಗಳು ಅಂಬಿಕಾತನಯದತ್ತರ ಕಾವ್ಯದ ವಸ್ತುಗಳಾಗಿವೆ.

ಕಾವ್ಯದಲ್ಲಿ ಸ್ತ್ರೀ ಮತ್ತು ಭೂಮಿಯನ್ನು ಸಮಾನವಾಗಿ ಕಾಣುವ ದೃಷ್ಟಿಕೋನಗಳು ಭಾರತೀಯ ದಾರ್ಶನಿಕತೆ, ತತ್ವಶಾಸ್ತ್ರ, ಸಾಹಿತ್ಯದಲ್ಲಿ ಕಂಡುಬರುತ್ತದೆ. ಭೂಮಿಯ ತಾಳ್ಮೆ, ಸಹನೆ, ಜೀವ-ಜಗತ್ತನ್ನು ಪೋಷಿಸುವ ಮೂಲಶಕ್ತಿ ಎಂದು ದೈವಿಕ ನೆಲೆಯಲ್ಲಿ ಆರಾಧಿಸುವ ಪರಿಪಾಠವು ಬಹಳ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಭೂಮಿತಾಯಿ ತತ್ವ ಎಂಬುದು ತಾಯಿತತ್ವದ ಒಂದು ಮುಖ. ಈ ತತ್ವದ ಅಭಿವ್ಯಕ್ತಿಯನ್ನು ಭಾರತೀಯ ಪರಂಪರೆಯಲ್ಲಿ ಕಾಣಬಹುದು. ಧರ್ಮ ಮತ್ತು ಕಲೆಯಲ್ಲಿ ತಾಯಿತತ್ವ ಎಂಬುದು ಒಂದು ರೀತಿಯ ಮೂಲ ಪ್ರತಿಮೆಯಾಗಿ ಹೋಗಿದೆ. ಭಾರತೀಯ ಮನಸ್ಸು ಉತ್ಕಟವಾಗಿ ಪ್ರತಿಸ್ಪಂದಿಸುವುದು ಈ ತಾಯಿತತ್ವದ ವಿವಿಧ ಅಭಿವ್ಯಕ್ತಿಗಳಿಗೆ ಭೂಮಿ ಎಂಬುದು ಜನ್ಮವಿತ್ತ ತಾಯಿಯಷ್ಟೇ ಪ್ರಾಮುಖ್ಯತೆಯನ್ನು ಭಾರತೀಯ ಜೀವನಕ್ರಮದಲ್ಲಿ ಪಡೆದಿದೆ. ವಾತ್ಸಲ್ಯದ ಮೂಲ ಸ್ಥಾಯಿರೂಪಾಗಿ ಭೂಮಿತಾಯಿ ಕಾಣಿಸುತ್ತದೆ. ಭೂಮಿಯು ಪ್ರಕೃತಿಯಲ್ಲಿನ ಪಂಚಭೂತಗಳ ಮಾತೃ ಸ್ವರೂಪವಾಗಿ ಮೂಲಸ್ಥಾಯಿಯಾಗಿದೆ. ಪ್ರಕೃತಿಯಲ್ಲಿ ಭೂಮಿ ಎನ್ನುವಂತಹದು ಅದಮ್ಯವಾದ ಶಕ್ತಿಯ ಸ್ವರೂಪವಾಗಿದೆ. ಭೂಮಿಯನ್ನು ತಾಯಿಯಾಗಿ ಕಾಣುವ ದೃಷ್ಟಿ ನಮ್ಮ ಸಂಸ್ಕೃತಿಯದು. ಜಾನಪದೀಯ ದೃಷ್ಟಿಯಲ್ಲಿ ಭೂಮಿ ಸಕಲರ ಪಾಲನೆ ಮತ್ತು ಪೋಷಣೆಯ ಭಾರಹೊರುವ ತಾಯಿಯಾಗಿದ್ದಾಳೆ. ಭೂಮಿಯ ಧಾರಣಶಕ್ತಿ, ಅದರ ಫಲವಂತಿಕೆ, ಜೀವ ಪೋಷಣೆಗುಣ, ಕ್ಷಮಾಗುಣ ಎಲ್ಲವನ್ನು ಮಾತೃತ್ವದೊಂದಿಗೆ ಸಂಯೋಜಿಸಿ ನೋಡುವ ಶ್ರದ್ಧೆ ಬೇಂದ್ರೆಯವರದು.

ಭೂಮಿ ಮತ್ತು ಮನುಷ್ಯರ ಸಂಬಂಧ ಬೇಂದ್ರೆ ಅವರ ಕವಿತೆಗಳಲ್ಲಿ ಗಾಢವಾಗಿದೆ. ಮೊದಲಗಿತ್ತಿ,



ಚಿಗರಿಗಂಗಳಚೆಲುವಿ, ಗಂಧವತಿ, ಭೂಮಿತಾಯಿ, ವಸುಧಾ, ಭೂದೇವಿ, ಇಳೆ ಎಂದರೆ ಬಿರಮಣ್ಣಲ್ಲಾ, ಭೂಮಿತಾಯಿಯ ಚೊಚ್ಚಲಮಗ, ಸ್ಥಿರ-ತಿರೆ, ಧರಣೀಧರಾ, ಪುಲಕ, ಧೂರ್ತ ಕೆಲಸವೇನು? ನನ್ನ ಹಸಿವುಹಿಂಗದಿರಲಿ, ಒಂದೇ ತಾಯಿಯ ಮಕ್ಕಳು ಇತ್ಯಾದಿ ಕವಿತೆಗಳಿಗೆ ಅನೇಕ ರೂಪಗಳಲ್ಲಿ ಭೂಮಿ ಕಾಣಿಸಿಕೊಳ್ಳುತ್ತಾಳೆ. ಭೂಮಿಯಲ್ಲಿ ಇರುವ ಅನೇಕ ಗುಣಗಳ ಮೂಲಕ ಅದಕ್ಕೆ ಸ್ಥಿರ, ತಿರೆ, ಕ್ಷಮಾ, ಗಂಧವತಿ ಎಂಬ ವಿವಿಧ ನಾಮಗಳಿವೆ.

"ಚಿಗರಿಗಂಗಳ ಚೆಲುವಿ"ಯಲ್ಲಿ ಪ್ರೇಮಮೂರ್ತಿಯಾದ ಭೂಮಿಯ ಸಂತ್ರಸ್ತ ಸ್ಥಿತಿಯ ವರ್ಣನೆಯಿದೆ. ಭೂಮಿತಾಯಿ ಹಿಂಸೆಯಿಂದ ತತ್ತರಿಸಿ ಹೋಗಿದ್ದಾಳೆ ಎಂಬುದು ಕವನದ ಆಶಯ. ಚಿಗರಿಗಂಗಳ ಚೆಲುವಿ ಎಂಬ ಹೆಸರೇ ಸೂಚಿಸುವಂತೆ ಆಕೆಯ ಮೃದುತ್ವವನ್ನು, ಕೋಮಲತೆಯನ್ನು ಹೇಳುತ್ತದೆ. ಆಕೆ ಅಪೂರ್ವ ಸುಂದರಿ ಬೇರೆ, ಸಮೃದ್ಧ ಬದುಕು ಆಕೆಯದು. ಆದರೆ ಆಕೆ ಉಲ್ಲಾಸದಿಂದಲ್ಲ ಹೂಗಾಯಿ ಹಣ್ಣು ತುಂಬಿದ ಬನದೊಳಗೆ ಅವಳು ಬೆದರಿ ನಿಂತಿದ್ದಾಳೆ. ಇದನ್ನು ಕವಿ ಈ ಮುಂದಿನ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ.

**"ಚಿಗರಿಗಂಗಳ ಚೆಲುವಿ ಬೆದರಿ ನಿಂತಾಳನೋಡೋ**
**ಬೆದರಿ ನಿಂತಾಳ**
**ಹೊಳಿಹಳ್ಳ ತೊರೆದಾವೋ**
**ಗಿಡಹಕ್ಕಿ ಬೆರೆದಾವೋ**
**ಅಗದವರ ಹೊಟ್ಟಿ ಉರದಾವೋ**
**ಗೆಣೆಯೊ ಉರದಾವ**
**ಅಂಥವರ ದಿಟ್ಟಿ ಮನಿಮುರದಾವ;**
**ಅದನೆ ತಾ ಕಂಡು ಕೊರಗ್ಯಾಳೊ**
**ಮರುಗ್ಯಾಳೊ**
**ಸೊರಗ್ಯಾಳೋ**
**ಹೂ ಕಾಯಿ ಹಣ್ಣು ತುಂಬಿದ ಬನದಾಗ ॥**
**ಚಿಗರಿಗಂಗಳ........**

ಅವಳ ಬೆದರಿಕೆಗೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಅವಳ ಸಮೃದ್ಧಿ ಜನರಿಗೆ ತೃಪ್ತಿಯನ್ನು ಕೊಡುವುದರ ಬದಲು ಅಸೂಯೆಯ ಭಾವನೆಯನ್ನು ಹುಟ್ಟಿಸಿದೆ. ಆದರೆ ಆಕೆಯ ಚೆಲುವು, ಸಮೃದ್ಧಿ ಆರಾಧನಾಭಾವದ ಬದಲಿಗೆ ದ್ವೇಷವನ್ನು ಪ್ರಚೋದಿಸಿದೆ. ಹೇಯವಾದ ಕೇಡಿಗತನವನ್ನು ಬಡಿದೆಬ್ಬಿಸಿದೆ. ಇಂಥ ವಾತಾವರಣವನ್ನು ಕಂಡು ಆ ಚೆಲುವಿ ಇನ್ನೇನು ಮಾಡಬಲ್ಲಳು? ದ್ವೇಷ ಯಾವಾಗಲೂ ಜೀವ ವಿರೋಧಿ ಆಗಿದೆ. ಹಿಂಸೆ ಎಲ್ಲ ಕಡೆಗೆ ಹಬ್ಬಿದೆ ಇಡಿ ವಾತಾವರಣ ತಲ್ಲಣಗೊಂಡಿರುವುದನ್ನು ಮುಂದಿನ ಸಾಲುಗಳು ಹೇಳುತ್ತವೆ.

**"ಬ್ಯಾಟಿ ನಾಯೊದರ್‍ಯಾವೋ**
**ಹಸುಜೀವ ಬೆದರ್‍ಯಾವೋ**
**ಗಳಗಳನೆ ಗಿಡಬೇಲಿ ಉದರ್‍ಯಾವೋ**
**ಗೆಣೆಯೊ ಉದರ್‍ಯಾವ"**

ಮನುಷ್ಯನ ಅಧಿಕಾರ ದಾಹವೇ ಸ್ವಾರ್ಥ ಲೋಭಗಳನ್ನು ವಿನಾಶ ಬುದ್ಧಿಯನ್ನು ಕ್ರೌರ್ಯವನ್ನು ಹುಟ್ಟುಹಾಕಿದೆ. "ಮುಂಜಾನೆ ತಾನೆದ್ದು ಎಳ್ಳು ಜೀರಿಗೆ ಬೆಳೆವ ಭೂಮಿ ತಾಯ ನೆನೆಯುವೆ' ಎಂಬ ಕೃತಜ್ಞತಾ ಭಾವದ ಬದಲು ಭೂಮಿಯನ್ನು ಬರಿದು ಮಾಡುವ ಕ್ರೌರ್ಯ ಮನುಷ್ಯತ್ವವನ್ನೇ ನಾಶಮಾಡುತ್ತಿದೆ. ನೈತಿಕ ಅಧಃಪತನವನ್ನುಂಟು ಮಾಡುತ್ತಿದೆ. ತಾಯಿ-ಮಗುವಿನ ಸಂಬಂಧ ಸೂಚಿಸುವ ಹಸು-ಕರುವಿನ ಪ್ರತಿಮೆಯಿದ್ದ ಜಾಗದಲ್ಲಿ ಧುತ್ತನೆ ಮೂಡುವ ಬೇಟೆ ನಾಯಿಗಳ ರೂಪಕವು ತಲ್ಲಣವನ್ನುಂಟು ಮಾಡುತ್ತದೆ. ಹಾಡೆ ಹಗಲು ಜೀವದ ಬೇಟೆ. ಈ ಬೇಟೆಯಿಂದ ಇಡಿಯ ಜೀವ ಪ್ರಪಂಚವೇ ಅದುರಿಹೋಗಿದೆ.

**"ಆಳುಗಳ ಹೋರಾಟ**
**ಆಳುವವರಿಗೆ ಆಟ**
**ಗಾಳಕ್ಕೆ ಸಿಕ್ಕ ಮೀನದ ಗೋಳಾಟೊ**
**ಗೆದ್ದವರ ಇದ್ದವರ ಹಾರಾಟೊ**
**ಅರೆಸತ್ತ ಜೀವಾ ಕೊಳತಾವೊ**
**ಹುಳುತಾವೊ**
**ಆಳತಾವೊ**
**ಹಸುಗೂಸು ತಿರುಗಿ ಹೊಟ್ಯಾಗ ಹುಗಿದ್ವಾಂಗ**
**॥ಚಿಗರಿಗಂಗಳ.......**

ಭೂಮಿಯ ಈ ಹಿಂಸೆಯನ್ನು ನಿರ್ದಿಷ್ಟ ಸಾಮಾಜಿಕ ದೃಷ್ಟಿಕೋನದಿಂದ ಹೇಳಲಾಗಿದೆ. ಈ ಲೋಕದ ಹಿಂಸೆ ಮೂಲತಃ ಶಕ್ತರು, ಆ ಶಕ್ತರ ನಡುವಣ ವ್ಯತ್ಯಾಸದಿಂದ ಬಂದದ್ದು ಎಂಬುದನ್ನು ಕವನ ಹೇಳುತ್ತದೆ. ಬಲಿಷ್ಠರ ದೌರ್ಜನ್ಯವೇ ಈ ಭೂಮಿಯ ಬದುಕನ್ನು ದುಃಖಮಯವನ್ನಾಗಿ ಮಾಡಿದೆ ಎಂಬ ಅಂಶವೂ ಇದರಿಂದ ಧ್ವನಿತವಾಗುತ್ತದೆ. ಮನುಕುಲದಲ್ಲಿಯೇ ಆಳವಾಗಿ ಬೇರೂರಿರುವ ಹಿಂಸೆಯ ಬಗ್ಗೆ ಅಪಾರ ನೈತಿಕ ಸಿಟ್ಟಿನಿಂದ ಬಂದ ಟೀಕೆ ಇದು. ಕೊನೆಯಸಾಲು ಸೃಷ್ಟಿಯ ಕ್ರಿಯೆಯನ್ನು ತಿರುಗು ಮುರುಗಾದುದನ್ನು ಸೂಚಿಸುತ್ತದೆ. ಉಕ್ಕಿ ಬರುವ ತನ್ನ ದುಃಖವನ್ನು ಬದಿಗೊತ್ತಿ ಭೂಮಿ ತನ್ನ ಮಕ್ಕಳಿಗೆ ಬುದ್ಧಿ ಹೇಳುತ್ತಾಳೆ.

**ತನ್ನತಾಸುತ್ತ್ಯಾಳೊ**
**ಹೊತ್ತಿನ ಬೆನ್ನತ್ತ್ಯಾಳೊ**
**ತಿಂಗಳಿನ ಬಗಲಾಗತ್ಯಾಳೊ**
**ಗೆಣೆಯೊ ಎತ್ತ್ಯಾಳೋ**
**ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ**
**ನಿಂತ ನೆಲವೆಂದು ಕಡಿಲಾತೊ**
**ಬಡಿಲಾಳೊ**
**ಒಡವ್ಯಲ್ಲೊ ಮಗನೆ ಉಸಿರಿದ್ದೊಡಲಂತಾಳೋ ॥**
**ಚಿಗರಿಗಂಗಳ......**

ಒಡೆದು ಚೂರು ಮಾಡಲು ತಾನೊಂದು ವಸ್ತುವಲ್ಲ. ಜೀವಂತತಾಯಿ ಎಂದು ತನ್ನ ದುಷ್ಟ ಮಕ್ಕಳಿಗೆ ಅವಳು ತಿಳಿ ಹೇಳುತ್ತಾಳೆ. ಮನುಷ್ಯ ತನ್ನ ಅಸೂಯೆ, ಕ್ರೌರ್ಯ, ಹಿಂಸೆ ತುಂಬಿದ ಕೃತ್ಯಗಳಿಂದ ತನ್ನ ಭಾಗ್ಯವನ್ನೇ ಹೇಗೆ ನಾಶ ಮಾಡುತ್ತಿದ್ದಾನೆ ಎನ್ನುವುದು ಕವಿತೆಯ ಒಟ್ಟು ಆಶಯವಾಗಿದೆ. ಭೂಮಿ ನಿಗಟಿಕಳಲ್ಲ ಆದರೆ ಮನುಷ್ಯನ ಮನಸ್ಸೇ ಮನುಷ್ಯನ ವೈರಿ ಎಂಬ ಭಾವ ಇಲ್ಲಿ ಅಭಿವ್ಯಕ್ತವಾಗಿದೆ. "ಒಡವ್ಯಲ್ಲೊ ಮಗನೆ ಉಸಿರಿದ್ದೊಡಲಂತಾಳೋ" ಎನ್ನುವಲ್ಲಿ ಭೂಮಿಯನ್ನು ಭೋಗವಸ್ತುವಾಗಿ ಕಾಣದೇ ಜೀವಂತವಾದ

ಭಾವವಾಗಿ ಕಾಣಬೇಕೆಂಬ ಆರ್ತಕರೆ ಕೇಳಿಸುತ್ತದೆ. ಮಾತೃ ಮೂಲವಾದ ಚಿಂತನೆಯು ಮಾತ್ರ ಈ ಭೂಮಿಯನ್ನು ಉಳಿಸಬಲ್ಲದು. ಎಲ್ಲರ ಎದೆಯಲ್ಲೂ ಮಾತೃಭಾವ ಜಾಗೃತವಾದಾಗ ಮಾತ್ರ ಸೃಷ್ಟಿಗೆ ಉಳಿಗಾಲವೆಂಬ ದೃಷ್ಟಿಯನ್ನು ಕವಿತೆ ಸ್ಥಾಪಿಸುತ್ತದೆ. "ಮೊದಲಗಿತ್ತಿ" ಕವನದಲ್ಲಿ ಭೂಮಿಯ ರೌದ್ರರೂಪದ ದರ್ಶನವಿದೆ. ಭೂಮಿ ತಾಯಿಯ ತಾಳ್ಮೆ ಮತ್ತು ನವೋನವತೆಯನ್ನು ವರ್ಣಿಸಲಾಗಿದೆ. 'ಮೊದಲಗಿತ್ತಿ' ಎಂಬ ಶೀರ್ಷಿಕೆಯಲ್ಲಿಯೇ ಯಾರ ಹೆದರಿಕೆಯೂ ಇಲ್ಲದೇ ಮದುವಣಗಿತ್ತಿಯಾಗಿ ಬಂದ ಸಮಸ್ಯೆಯನ್ನು ಏಕಾಂಗಿಯಾಗಿ ಎದುರಿಸುವ ಸಾಮರ್ಥ್ಯ ನಿನಗಿದೆ ಎಂಬ ಭಾವವನ್ನು ಹೇಳುತ್ತದೆ.

**"ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ**
**ನೆತ್ತರು ಒರೆಹಚ್ಚಿ ನೋಡಿರುವೆ"**

ಭೂಮಿ ತನ್ನನ್ನು ಅವಲಂಬಿಸಿದವರೆಲ್ಲರ ಕ್ಷೇಮವನ್ನು ಚಿಂತಿಸುತ್ತಾಳೆ. ಇಂಥ ಭೂಮಿಗೆ ಯಜಮಾನರು ಯಾರು? ಭೂಮಿ ಕೇವಲ ಪ್ರದೇಶವಾಚಕವಾದಾಗ ಅದನ್ನು ಆಳುವವನು ಭೂಪತಿಯಾಗುತ್ತಾನೆ. ಭೂಮಿ ತನ್ನ ದಾಸಿ ಎಂದು ದರ್ಪದಿಂದ ಆಡಳಿತ ಹಾಗೂ ಶೋಷಣೆ ನಡೆಸುತ್ತಾನೆ. ತನ್ನ ಸುಖಕ್ಕಾಗಿ ಭೂಮಿಯ ಸಕಲ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತಾನೆ. ಭೂಮಿ ಹೊಲವೆಂಬ ಉತ್ಪಾದಕ ವಸ್ತು ಆದಾಗ ಅದರ ಯಜಮಾನ ಪತಿ ಬೆಳೆಯನ್ನು ಸಂಗ್ರಹಿಸುವ, ಹಂಚುವ ವ್ಯವಸ್ಥೆಯನ್ನು ತನ್ನ ಅಧೀನ ಮಾಡಿಕೊಂಡು ಆ ಬೆಳೆಗಳನ್ನೆಲ್ಲ ಬೆಳೆದ ರೈತನ ಶೋಷಣೆ ಮಾಡುತ್ತಾನೆ. ರೈತ ಹೊಲದ ಯಜಮಾನನ ಒತ್ತೆಯಾಳಾಗಿ ತಲೆ-ತಲಾಂತರ ದುಃಖ ಅನುಭವಿಸಬೇಕಾಗುತ್ತದೆ. ಇತರ ಪ್ರಜೆಗಳು ರಾಜನ-ದಾಸರಾಗಿ ಬದುಕಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಭೂಮಿ ಯಾರದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭೂಮಿ ರಾಜನದೆ? ಹೊಲದ ಯಜಮಾನದೆ? ಸಕಲ ಪ್ರಜೆಗಳದೆ? ಭೂಮಿ ತನ್ನ ಹೆಂಡತಿ, ತಾನು ಅವಳ ಪತಿ-ಭೂಪತಿ ಎಂದು ಭಾವಿಸುವವರ ಗುಣವನ್ನು ಬೇಂದ್ರೆಯವರು ಅತ್ಯಂತ ಖಾರವಾಗಿ ಮೊದಲಗಿತ್ತಿ ಕವನದಲ್ಲಿ ವಿವರಿಸುತ್ತಾರೆ ಈ ಮುಂದಿನಂತೆ

**"ಪಾತಾಲಗಂಡರು ಕೆಲ-ತಾಯಿಗಂಡರು**
**ಅವರನ್ನು ಮಡಿಲಾಗ ಮಡಗಿಸಿಹೆ**
**ಹದಿನಾರು ರಾಜರು ತಲೆಕೆಳಗಾದರು**
**ಆದರು ತಲೆ ಎತ್ತಿ ನಿಂತಿರುವೆ**
**ನಿನ್ನ ತೇಜದ ಮುಂದೆ ರಾಜತೇಜವು ಕೂಸು**
**ಮೊದಲಗಿತ್ತಿಯು ನೀನು ಮರೆಯುತಿಹೆ"**

ಭೂಮಿತಾಯಿ ದಯಾಮಾಯಿ, ತಾಯಿಯನ್ನೇ ಹೆಂಡತಿ ಎಂದು ತಿಳಿದು ನಡೆಯುವ ಭೂಪತಿ ತಾಯಿಗಂಡರ ಉದ್ಧಟತನವನ್ನು, ಅವರೆಲ್ಲರೂ ಕೂಸು ಎಂದು ಭಾವಿಸಿ ಭೂಮಿ ಕ್ಷಮಿಸುತ್ತ ಬಂದಿದ್ದಾಳೆ ಭೂಮಿತಾಯಿಯ ದಾಹ ಎಷ್ಟೆಂಬುದನ್ನು ಮುಂದಿನ ಸಾಲುಗಳಲ್ಲಿ ವರ್ಣಿಸಿದ್ದಾರೆ.

**"ಒಕ್ಕುಡಿತೆ ಅರೆಮುಕ್ಕು ಎನುತೆನುತ ಹಲಕೆಲವು**
**ಪಾನಿಪತ್ತುಗಳನ್ನು ಮುಕ್ಕುಳಿಸುವೆ**
**ಕೊಡಲಿರಾಮನು ಎರೆದ ಕೆನ್ನೀರ ಜಳಕಕ್ಕೆ**
**ಕೂದಲು ನೆನೆಯಲಲ್ಲೆನುತಿಹೆ"**

ಶಕ್ತಿ ಮತ್ತು ಅಧಿಕಾರದ ಬೆಂಬಲದಿಂದ ಮೆರೆದ ಜನಗಳನ್ನು ಭೂಮಿ ಹಿಂಸೆಯಿಂದಲೇ ನಾಶಮಾಡಿದ್ದಾಳೆ. ಭೂಮಿಯ ಮೇಲೆ ಅತ್ಯಾಚಾರ ಮಾಡಿದವರನ್ನು ಶಿಕ್ಷಿಸಲು ದೇವರು ಕೂಡ ರಕ್ತ ಪ್ರವಾಹವನ್ನು ಹರಿಸಬೇಕಾಗಿದೆ ಎಂಬುದನ್ನು ಪ್ರಾಚೀನ ಕಾಲದಿಂದಲೂ ಚರಿತ್ರೆಯಲ್ಲಿ ಕಾಣುತ್ತೇವೆ. "ನೆತ್ತರ ಮೀಯಿಸುವ ಕೆಂಚರ ಕೈಯಿಳಿಸಿ" ಎಂಬ ಸಾಲು ಬ್ರಿಟಿಷರನ್ನು ಸ್ಮರಣೆಗೆ ತರುತ್ತದೆ. ಅಂದರೆ ಭೂದೇವಿಯನ್ನು ವರಿಸಲು, ಅಪಹರಿಸಲು ಆಕ್ರಮಿಸಲು ಇಲ್ಲಿಯವರೆಗೂ ಯಾರಿಂದಲೂ ಸಾಧ್ಯವಾಗಿಲ್ಲ. ಅವಳು ಇನ್ನು ಹಾಗೆಯೇ ಮೊದಲಗಿತ್ತಿಯಾಗಿಯೇ ಉಳಿದಿದ್ದಾಳೆ.

**"ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ**
**ಹೂಮುಡಿಸಿ ಕೊಂಡೆಂದು ನೀನಲಿವೆ**
**ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು**
**ವನವಾಸ ನವಮಾಸ ತೀರಿಸುವೆ**
**ಮುನ್ನಿಲ್ಲ ಇನ್ನಾರೆ ಮಕ್ಕಳ ದಿನವೆಂದು**
**ಮೂಡೀತು ಹೇಳವ್ವ ಬಿನ್ನವಿಸುವೆ**
**ಎಂದು ಮಂಗಲ ನಿನ್ನ ಗರ್ಭಕೆ ಇನ್ನೂ**
**ಮೊದಲಗಿತ್ತಿಯಂತೆ ಮರೆಯುತಿಹೆ"**

ಭರತಮಾತೆ ಯುಗಪುರುಷನನ್ನು ಹಡೆಯುವ ದಿನಕ್ಕಾಗಿ ಕವಿ ಕಾಯುತ್ತಿದ್ದಾರೆ. ಅದು ಅವರ ನಿರೀಕ್ಷೆ ಹಾಗಾಗಿ ಕೊನೆಯ ಸಾಲಿನಲ್ಲಿ ಎಂದು "ಮಂಗಲ ನಿನ್ನ ಗರ್ಭಕೆ?" ಎಂದು ನಿರೀಕ್ಷೆಯ ಪ್ರಶ್ನೆಯನ್ನು ಹಾಕುತ್ತಾರೆ. ಇನ್ನು ಮೊದಲಗಿತ್ತಿಯಂತೆ ಮೆರೆಯುತಿರೆ" ಎಂದು ಹೇಳುವ ಮೂಲಕ ಗರ್ಭಧರಿಸಿ ಯುಗಪುರುಷನನ್ನು ಹೆರಲು ಆಹ್ವಾನಿಸುತ್ತಾರೆ.

"ಭೂಮಿತಾಯಿಯ ಚೊಚ್ಚಲ ಮಗ" ಕವನದಲ್ಲಿ ಅನ್ನವನ್ನು ನೀಡುವ ರೈತರು, ಅವರಸ್ಥಿತಿ ಎಂದೆಂದಿಗೂ ಚಿಂತಾಜನಕವಾಗಿರುವ ದುಸ್ಥಿತಿಯು ಲಕ್ಷಣ. ಭೂಮಿಯ ಮೇಲೆ ಬದುಕುವ ಮತ್ತು ಬಾಳುವ ಎಲ್ಲರ ದೃಷ್ಟಿಕೋನ ಪರಿಶುದ್ಧವಾಗಬೇಕು ಕಣ್ಣು ತಿಳಿಯಾಗಬೇಕು ಎಂಬ ಆಶಯವನ್ನು ಹೇಳುತ್ತಾರೆ.

**ಭೂಮಿತಾಯಿಯಾ**
**ಚೊಚ್ಚಲ ಮಗನನ್ನು**
**ಕಣ್ಣೆರೆದೊಮ್ಮೆ**
**ನೋಡಿಹಿರೇನು?**

ಈ ಪದ್ಯದ ಆರಂಭವನ್ನು ಗಮನಿಸಿದಾಗ ರೈತಯೊದು? ಆತ ಭೂದೇವಿಯ ಚೊಚ್ಚಲಮಗ ಅಂದ ಮೇಲೆ ಅವನ ಆರೈಕೆ, ಹಿರಿಮೆ, ಸ್ಥಾನಮಾನ ಇವೆಲ್ಲವೂ ವಿಶಿಷ್ಟವಾದದ್ದಾಗಿರಬೇಕು. ಇದನ್ನು ಕವಿ ನಿರೀಕ್ಷಿಸುತ್ತಾರೆ. ಆದರೆ ಆದದ್ದೇನು, ಕಣ್ಣು ತೆರೆದು ಒಮ್ಮೆ ನೋಡು ಎಂದು ಹೇಳುತ್ತಾರೆ. ವಾಸ್ತವ ಹಾಗಿಲ್ಲ ಸ್ಥಿತಿಯೇ ಬೇರೆ ಇದೆ ಈಗೊಮ್ಮೆ ನೋಡು ಎಂದು ಭೂಮಿತಾಯಿಯನ್ನು ಕೇಳುತಾರೆ. ಆತ ಪ್ರಕೃತಿಯ ಕೂಸು ಆದರೆ ಪ್ರಕೃತಿ ಕೈಕೊಟ್ಟಿದೆ. ರೈತನು ಬಿತ್ತುವ ಕೆಲಸವನ್ನು ಮಾಡುತ್ತಾನೆ. ಮಳೆ ಬಂದು ಜಳಕವಾಗಬೇಕಾದಲ್ಲಿ "ಬೆವರಿನೆಜಳಕ" ಆಗುತ್ತಿದೆ. ಆದರೆ ಕಂಬನಿ ನೀರು ಹರಿಯುತ್ತಿದೆ ಎಂದು ನಮ್ಮ ದೇಶದ ವ್ಯವಸಾಯವಿಧಾನವನ್ನು ಹೇಳುತ್ತಾರೆ. ಇವನು ಭೂಮಿತಾಯಿಯ ಮಗ ಹೇಗಿರಬೇಕಾದವನು ಹೇಗಿದ್ದಾನೆ ಎಂದು ರೈತನ ಸ್ವರೂಪವನ್ನು ಹೇಳುತ್ತಾರೆ.

**"ಕೊರಳಿಗೆ ಹತ್ತಿದೆ**
**ಸಾಲದ ಶೂಲ**
**ಆದರೂ ಬರದೋ**
**ಯಮನಿಗೆ ಕರುಣ**
**ಉಸಿರಿಗೆ ಒಮ್ಮೆ**
**ಜನನಾ-ಮರಣಾ"**

ಇಂದಿನ ರೈತನಿಗೂ ಎಪ್ಪತ್ತೈದು ವರ್ಷಗಳ ಹಿಂದಿನ ರೈತನಿಗೂ ತುಂಬಾ ವ್ಯತ್ಯಾಸವಿದೆ. ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ರೈತನಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಸಾಲದಿಂದ ಆತ್ಮಹತ್ಯೆ ಎಂಬ ವಿಷಯವನ್ನು ದಿನಪತ್ರಿಕೆಯಲ್ಲಿ ತಪ್ಪದೆ ನೋಡುತ್ತಿರುತ್ತೇವೆ. ಉಸಿರಾಡುವುದೇ ಕಷ್ಟ, "ಉಸಿರಿಗೆ ಒಮ್ಮೆ ಜನನಾ-ಮರಣ" ಇದಕ್ಕಿಂತ ರೈತನ ಪರಿಸ್ಥಿತಿಯನ್ನು ಕಠಿಣವಾಗಿ ಹೇಳಲು ಸಾಧ್ಯವಿಲ್ಲ. ರೈತನಾದವನು ಉತ್ತಿ-ಬಿತ್ತಿ ಬೆಳೆದು ಜಗತ್ತಿಗೆ ಆಹಾರದ ಕಣಜ ಮಾಡಬೇಕಾದವನು ಸಾಯುವೆ ಎಂದು ಎಣಿಸುವಂತಾದರೆ ಅದಕ್ಕಿಂತ ದುರಂತ ಇನ್ನೊಂದಿಲ್ಲ. ಬೇಂದ್ರೆಯವರು ಎಲ್ಲೂ ಕ್ರಾಂತಿಕಾರಕ ಭಾಷಣ ಮಾಡುವುದಾಗಲಿ, ಉದ್ರೇಕಕಾರಿ, ಪ್ರಚೋದನಕಾರಿ ಬರಹ ಬರೆಯುವುದಾಗಲೀ ಜನರನ್ನು ಎತ್ತಿ ಕಟ್ಟುವುದಾಗಲೀ ಮಾಡದೆ ರೈತನ ಸಾಮಾನ್ಯ ಸ್ಥಿತಿಗತಿಯ ವಾಸ್ತವ ಚಿತ್ರವನ್ನು ಕಾವ್ಯದ ಪರಿಭಾಷೆಯಲ್ಲಿ ಸೃಜಿಸುತ್ತಾರೆ. ಇಲ್ಲಿ ಭೂಮಿ ಮತ್ತು ಮನುಷ್ಯರ ಸಂಬಂಧ ಅತ್ಯಂತ ಗಾಢವಾದುದು. ಭೂಮಿಯಲ್ಲಿನ ಮನುಕುಲದ ವಿಕಾಸತತ್ವವು ಭೂಮಿಯ ಮೇಲಿನ ಅದ್ಭುತವೆನಿಸಿದೆ. ಚೆಲುವು ಮತ್ತು ಹಿಂಸೆ ಎಂಬುದು ಎರಡು ಗುಣಗಳ ರೂಪದಲ್ಲಿ ಭೂಮಿಯ ಸೌಂದರ್ಯ ಮತ್ತು ವಿನಾಶಕಾರಿ ಶಕ್ತಿಯು ವ್ಯಕ್ತವಾಗಿರುವುದನ್ನು ಕಾಣಬಹುದು. ಚೈತನ್ಯಮಯ ಸ್ವರೂಪಿಯಾಗಿ ಭೂಮಿಯು ಅತ್ಯಂತ ಮಹತ್ವದ ಶಕ್ತಿಯೆನಿಸಿದೆ.

"ಇಳೆ ಎಂದರೆ ಬರಿಮಣ್ಣಲ್ಲ" ಕವನದಲ್ಲಿ ಭೂಮಿತಾಯಿಯ ದೇವ-ಮಾತಾ ಪದವಿಯನ್ನು ವಿವರಿಸಲಾಗಿದೆ. ಒಂದೇ ತಾಯಿಯ ಮಕ್ಕಳಾಗಿರುವ ಜನತೆಯಲ್ಲಿ ರಕ್ತದ ಓಕುಳಿಯಾಡುವ ಬುದ್ಧಿ ಎಂದು ಬದಲಾದೀತು ಎಂಬ ಪ್ರತೀಕ್ಷೆ ಇಲ್ಲಿದೆ. ಇಳಾತನಯರಲ್ಲಿ ಇಳೆಯ ಸದ್ಗುಣಗಳ ಅಭಿವೃದ್ಧಿಯಾಗಬೇಕಾಗಿದೆ ಎಂಬ ಭಾವವನ್ನು ವ್ಯಕ್ತಪಡಿಸುತ್ತದೆ.

**"ಇಳೆಯೆಂದರೆ ಬರಿ ಮಣ್ಣಲ್ಲ**
**ನಮಗೋ ನೋಡುವ ಕಣ್ಣಿಲ್ಲ**
**ಏಸುತಿಂದರು ತೀರದಿದೆ**
**ಏನು ತುಂಬಿಯವಾ ಮೀರದಿದೆ"**

ಎಂದು ಹೊಸಜೀವನ ದೃಷ್ಟಿಯನ್ನು ನೀಡುತ್ತಾರೆ. ಭೂಮಿಯ ಬಗೆಗೆ ಮನುಷ್ಯನಿಗೆ ಅನೇಕ ಅಸಹಜವಾದ ಧೋರಣೆಗಳು ಬಂದು ಬಿಡುತ್ತವೆ. ಆಕೆಯ ಚೈತನ್ಯ, ಪ್ರೀತಿ ಯಾವುದೂ ಕಾಣುವುದಿಲ್ಲ. ಆಕೆಯ ಆಕೃತಿಯೇ ಕಾಣದೆ ಬರೀ ಜಡವಾಗಿ ಕಾಣಲಾರಂಭಿಸುತ್ತಾಳೆ. ಆಕೆ ಬರೀ ಮಣ್ಣು ಎಂದು ಮನುಕುಲ ಭಾವಿಸಲಾರಂಭಿಸುತದೆ. ಅಂಥ ಧೋರಣೆಯನ್ನು ಬೇಂದ್ರೆ ಈ ಮೇಲಿನ ಸಾಲುಗಳಲ್ಲಿ ವಿರೋಧಿಸುತ್ತಾರೆ. ಆಕೆ ಮಣ್ಣು ಎಂದು ಭಾವಿಸಿದಾಗಲೇ ಮನುಷ್ಯ ವ್ಯಕ್ತಿತ್ವದಿಂದ ಪ್ರೀತಿಯೇ ಮಾಯವಾಗುತ್ತದೆ. ಅಂಥ ಪ್ರೀತಿಹೀನ ಬದುಕಿನ ಫಲ ಎಂದರೆ ಹಿಂಸೆ.

**"ಅಣ್ಣ-ತಮ್ಮಂದಿರು ತಮ್ಮ ತಮ್ಮೊಳಗೆ**
**ಕಾದಾಡಲು ಬೇಕೆ?**
**ನಲುಮೆಯ ನೀರನು ಕೆನ್ನೀರೆನ್ನುತ ಚೆಲ್ಲಾಡುವಿರೇಕೆ"?**

ಇಳೆ ಎಂದರೆ ಬರಿಮಣ್ಣಲ್ಲ ಎಂಬ ಅರಿವು ಮನುಷ್ಯನಿಗೆ ಬಂದೊಡನೆ ಆತನ ಸಂಬಂಧವೇ ಬದಲಾಗುತ್ತದೆ. ಅಂಥ ಸ್ಥಿತಿಯೊಂದು ಉದ್ಭವವಾಗಲಿ ಎಂದು ಕವಿ ಹಾರೈಸುತ್ತಾರೆ.

"ಭೂಮಿತಾಯಿ" ಕವನದಲ್ಲಿ ಭೂಮಿತಾಯಿಯು ವಾತ್ಸಲ್ಯದ ಮೂರ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ತಾಯಿಗೆ ತಾನು ಎಷ್ಟೊಂದು ಋಣಿ ಎಂಬುದನ್ನು ಮಗನೂ ಆಗಾಗ ಬಾಯಿಬಿಟ್ಟು ಹೇಳುತ್ತಾನೆ. ಭೂಮಿತಾಯಿಯ ಈ ಪ್ರೀತಿಯ ಋಣವನ್ನೇ ಕವನ ಹೇಳುತದೆ. ಭೂಮಿತಾಯಿಯ ಮಕ್ಕಳು ವರ್ಗರಹಿತ ಸಮಾಜ ಕಟ್ಟಬೇಕಾಗಿದೆ. ಎಲ್ಲರಲ್ಲಿಯೂ ಜ್ಞಾನದ ಬೆಳಕು ಸಮಾನವಾಗಿ ಬೆಳೆದಾಗ ಎಲ್ಲರಿಗೂ ಆನಂದವಾಗುತ್ತದೆ ಎಂಬ ಆಶಾವಾದಿ ಕವನ ಇದಾಗಿದೆ.

**"ಮೈತುಂಬ ಬಾಯಿ ನೀನು**
**ತುಟಿ ಮುದ್ದು ನನ್ನ ಪಾಲು**
**ಎದೆಯಾಳ ಮೊಲೆಯ ನೀನು**
**ಮೈ ತುಂಬ ನನಗೆ ಹಾಲು"**

ಭೂಮಿಯನ್ನು ಬಿಟ್ಟು ತನಗೆ ಬೇರೆ ನೆಲೆಯಿಲ್ಲ. ತಾನು ತಪ್ಪಿ ನಡೆದರೂ ಆ ನೆಲೆಯ ಆಶ್ರಯ ತನಗೆ ಇದೆ ಎಂದು ಮನುಷ್ಯ ಇಲ್ಲಿ ತನ್ನ ಮತ್ತು ತನ್ನ ತಾಯಿ, ಭೂಮಿಯ ಸಂಬಂಧದ ಸ್ವರೂಪವನ್ನು ಗುರುತಿಸುತ್ತಾರೆ. ಭೂಮಿಯ ಅಂತಃಸತ್ವವನ್ನೇ ಹೀರಿ ಬೆಳೆದ ಕವಿ ಮಾತೃಪ್ರೇಮದ ಆಗಾಧ ಭಾವ ವಿನ್ಯಾಸಕ್ಕೆ ಬೆರಗಾಗುತ್ತಾನೆ. "ಭೂಮಿಯ ಎದೆಯಾಳದ ಮೊಲೆ" ಎಂಬ ಪರಿಕಲ್ಪನೆಯು ಅಂತಃಚೈತನ್ಯದ

ರೂಪಕವಾಗಿದೆ. ಎದೆಹಾಲನ್ನು ಊಡುವ ಮೂಲಕ ಮಗುವಿನ ಅಂತರಂಗದೊಂದಿಗೆ ಅವ್ಯಕ್ತವಾಗಿ ಮಾತನಾಡುವ ಮಾತೃ ವಾತ್ಸಲ್ಯದ ಮಾತಿಕೆ ನಿಲುಕದ ಸ್ಪಂದನೆಗಳನ್ನು ತಲುಪಿಸುವ ತಾಯಿಯಂತೆ ಭೂಮಿಯು ನಮ್ಮ ಪೊರೆಯುತ್ತಾಳೆ. ಮಧುರಚೆನ್ನರ "ಏಳಮ್ಮಾ ಮಲಗಿರುವ ತಾಯಿ ಪೃಥವೀ"ಯಲ್ಲಿರುವಂತೆ ಇಲ್ಲಿ ಕೂಡ ಕವಿಯು ತಾಯಿಯನ್ನು

**"ನಿದ್ದೆಯನು ಮೀರಿನಿಂದು**
**ಮಕ್ಕಳನು ಎದ್ದು ಕರೆವ? ಎಂದು**

ಬೇಡಿಕೊಳ್ಳುತ್ತಿದ್ದಾನೆ. ತನ್ನೆಲ್ಲ ಸಮಸ್ಯೆಗಳ ಮೂಲವೂ ಬಹುಶಃ ಇದೆ ಆಗಿದೆ ಎಂದು ಆತನಿಗೆ ಬಾಸವಾಗುತ್ತಿದೆ. ನಿದ್ದೆಯಲ್ಲೇ ತಾಯಿ ಮಗುವನ್ನು ಸಂಬಾಳಿಸುವ ಪ್ರೀತಿಯಂತೆ ಈ ಸಂಬಂಧವಿದೆ. ಆದ್ದರಿಂದಲೇ ತನ್ನನ್ನು ಕಾಡುತ್ತಿರುವ ಸಮಸ್ಯೆಗಳಿಂದ, ಕತ್ತಲಿನಿಂದ ತನಗೆ ಮುಕ್ತಿಯಿಲ್ಲ ಎಂದು ಸ್ಪಷ್ಟವಾದದ್ದರಿಂದಲೇ ಆತ ಮತ್ತೆ ಮತ್ತೆ ತಾಯಿಯನ್ನು ಎಚ್ಚರವಾಗುವಂತೆ ಕೇಳುತ್ತಾನೆ. ಅವಳ ಹಾಲಿನಿಂದ ಆತನಿಗೆ ತೃಪ್ತಿಯಿಲ್ಲ. ಅವಳ ಬೆಳಕು ಹೊಮ್ಮಿ ತನ್ನ ಮೈಯಾ ಬೆಳಕಿನಿಂದ ತುಂಬಬೇಕು ಎಂದು ಅವಳನ್ನು ಆತ ಪ್ರಾರ್ಥಿಸುತ್ತಿದ್ದಾನೆ. ಬದುಕು ಬೆಳಕಾದಾಗಲೇ ಜೀವದ ಸಾಫಲ್ಯ ಎನ್ನುವುದು ಈ ಕವಿತೆಯ ಆಶಯ ಆಗಿದೆ. ತಾಯಿಯನ್ನು ಅಮೂರ್ತ ಪದಗಳಿಂದ ವರ್ಣಿಸದೆ. ಮೂರ್ತ ದೈಹಿಕ ವಿವರವನ್ನು ನೀಡುತ್ತಾ ಸಹಜವಾದ ತಾಯಿ–ಮಕ್ಕಳ ವಾತಾವರಣ ಕವನದಲ್ಲಿ ನಿರ್ಮಾಣವಾಗುತ್ತದೆ. ಪ್ರೀತಿಯಲ್ಲಿ ಈತ ತೇಲುತ್ತಿರುವನಾದರೂ ಈ ಮನುಷ್ಯ ಅಂಬೆಗಾಲಿಕ್ಕುವ ಹಸುಗೂಸಲ್ಲ ತಾಯಿಯ ಮತ್ತು ತನ್ನ ಸಂಬಂಧವನ್ನು ಬೌದ್ಧಿಕವಾಗಿ ವಿಶ್ಲೇಷಿಸುತ್ತಾನೆ.

'ಪ್ರೇಮಬೀಜ' ಕವನದಲ್ಲಿ ಭೂಮಿತಾಯಿಯ ಸಮಾನತೆ, ಪ್ರೀತಿ, ಭ್ರಾತೃತ್ವವನ್ನು ಕುರಿತು ಹೇಳುತ್ತದೆ ಮತ್ತು ಮನುಷ್ಯನ ಬದುಕು ನಡೆಯಬೇಕಾದರೆ ಪ್ರೀತಿಯು ಮುಖ್ಯ ಎಂಬ ಅಂಶವನ್ನು ಕವನದಲ್ಲಿ ಕಾಣುತ್ತೇವೆ.

**"ಇಳೆಯೆ ಮಕ್ಕಳೆಲ್ಲ ಬನ್ನಿ**
**ತಾಯ ತವರು ಮನೆಗೆ**
**ಭೇದ ಒಲಿಸಿ ಬಳಲಬೇಡಿ"**

ಈ ತಾಯ ಆಹ್ವಾನದ ಎದುರು ಮಕ್ಕಳಲ್ಲಿ ಇರುವ ಎಲ್ಲಾ ಭೇದಗಳೂ ಅಳಿಸಿ ಹೋಗಬೇಕು. ಜೀವನದಲ್ಲಿ ಅತ್ಯಂತ ಬೆಲೆಬಾಳುವ ಅಂಶ ಶಾಂತಿ, ಶಾಂತಿ ಮನುಷ್ಯನಿಗೆ ಹತಾಶೆಯಿಂದ, ಹಿಂಸೆಯಿಂದ ಬಿಡುಗಡೆ ಹೊಂದಿದಾಗ ಮಾತ್ರ ಸಾಧ್ಯ. ಆದರ್ಶ ಬದುಕಿನ ಮೂಲ ಪ್ರೇರಣೆ ಪ್ರೇಮ, ಭೂಮಿತಾಯಿಯ ಸಮಸ್ಯೆಗಳೆಲ್ಲಾ ಪ್ರಾರಂಭವಾಗುವುದು ಈ ಪ್ರೇಮದ ಕೊರತೆಯಿಂದಲೇ. ಆದ್ದರಿಂದ ತನ್ನ ಪ್ರೀತಿಯನ್ನು ಭೂಮಿತಾಯಿ ಮಕ್ಕಳಿಗೆ ನೀಡುತ್ತಾಳೆ. ಅದಕ್ಕಾಗಿಯೇ ಬೇಂದ್ರೆಯವರು ಭೂಮಿತಾಯಿಯ ಪ್ರೇಮದ ಅವಶ್ಯಕತೆಯನ್ನು ಕುರಿತು ಹೇಳುತ್ತಾರೆ.

**ಡಾ. ವಿಶ್ವನಾಥ**

# ದೆಹಲಿ ಕನ್ನಡ ಶಾಲೆಯಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 64ನೇ ಸಂಸ್ಥಾಪಕರ ದಿನಾಚರಣೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 64ನೇ ಸ್ಥಾಪಕರ ದಿನವನ್ನು ಶಾಲೆಯ ಜೆ.ಪಿ.ರಾಜರತ್ನಂ ಸಭಾಂಗಣದಲ್ಲಿ ದಿ..ಅಕ್ಟೊಬರ್ 5  2022ರಂದು ವಿಜಯ ದಶಮಿಯ ದಿನ ಆಚರಿಸಲಾಯಿತು.

ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಕನ್ನಡಿಗ ಸಂಸ್ಥೆಯ ಮಾಜಿ ಖಜಾಂಚಿ ಶ್ರೀ  ಕೆ.ಎಸ್.ಜಿ ಶೆಟ್ಟಿರವರು ಸ್ಥಾಪಕ ಅಧ್ಯಕ್ಷ ದಿ.ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ ಅವರು ಮಾತನಾಡಿ ಹಿರಿಯರ ಶ್ರಮ ಹಾಗೂ ದೂರದೃಷ್ಟಿಯ ಫಲವಾಗಿ ಸಂಸ್ಥೆಯು ನಿರ್ಮಾಣವಾಗಿದೆ. ಕನ್ನಡಿಗರ ಅಸ್ತಿತ್ವದ ಸಂಕೇತವಾಗಿ ದೆಹಲಿಯ ಕನ್ನಡ ಶಿಕ್ಷಣ ಸಂಸ್ಥೆಯು ನಿಂತಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಚಾರ. ಇತರ ದಕ್ಷಿಣ ಭಾರತೀಯರಿಗೆ ಹೋಲಿಸಿದರೆ ನಮ್ಮವರ ಸಂಘಟನಾತ್ಮಕ ಕೊರತೆ ಎದ್ದು ಕಾಣುತ್ತದೆ ಎಂದು ಅಭಿಪ್ರಾಯಪಟ್ಟರು.ಸಂಸ್ಥೆಯ ಬೆಳವಣಿಗೆಯ ದೃಷ್ಟಿಯಿಂದ ಗುಂಪುಗಾರಿಕೆಗೆ ಅವಕಾಶ ನೀಡಬಾರದು. ಚುನಾವಣೆಯ ಬಳಿಕ ಗುಂಪುಗಾರಿಕೆಯಿಂದ ಹೊರ ಬಂದು ಎಲ್ಲರೂ ಒಂದಾಗಿ ಮುನ್ನಡೆದರೆ ಸಂಸ್ಥೆಯ ಬೆಳವಣಿಗೆ ಸಾಧ್ಯ ಎಂದು ಕಿವಿಮಾತು ಹೇಳಿದರು.ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರು ಮತ್ತು ಜನಪ್ರತಿನಿಧಿಗಳ ಸಹಕಾರ ಪಡೆದು ಸಂಸ್ಥೆಯ ಒಳಿತಿಗಾಗಿ ಕಾರ್ಯಯೋಜನೆ ರೂಪಿಸುವುದು ತೀರಾ ಅಗತ್ಯ ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಮಾತನಾಡಿ ವೈಯಕ್ತಿಕ ಸ್ವಾರ್ಥ ಬದಿಗಿಟ್ಟು ಸಂಸ್ಥೆಯ ಬೆಳವಣಿಗೆಗೆ ದೂರದೃಷ್ಟಿಯ ಚಿಂತನೆ ಅತ್ಯಗತ್ಯ. ಎಲ್ಲರ ಅಭಿಪ್ರಾಯ, ಸಲಹೆ ಪಡೆದು ಮುನ್ನಡೆಯುವ ಸಲುವಾಗಿ ಸಂಸ್ಥೆಯ ಏಳಿಗೆಗೆ ಕೈ ಜೋಡಿಸಿ ಎಂದು ದೆಹಲಿ ಕನ್ನಡಿಗರಲ್ಲಿ ಮನವಿ ಮಾಡಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ವಂದಿಸಿದರು. ಶಿಕ್ಷಕಿ ಶ್ರೀಮತಿ ರೇಖಾ ಐ. ಕಾರ್ಯಕ್ರಮವನ್ನು ನಿರೂಪಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಗೌರವ ಖಜಾಂಚಿ ಶ್ರೀ ಕಾಶಿನಾಥ ಬಿ. ಬೀರಾದಾರ್, ಸದಸ್ಯರಾದ ಶ್ರೀ ಗಿರೀಶ್ ಎಸ್., ಶ್ರೀ ಉಮೇಶ್ ಬಿ.ಆರ್., ಶಾಲೆಯ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ಹಾಗು ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಮತ್ತಿತರೆರು ಉಪಸ್ಥಿತರಿದ್ದರು.

**ಅರವಿಂದ ಬಿಜೈ**

## ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಮತ್ತು ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದ ಶ್ರೀ ಸುಂದರ್ ಬಿ.ಎಂ ಅವರು ದಿನಾಂಕ 15.10.2022 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

**ಅಗಲಿದ ಶ್ರೀಯುತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ಸಮಸ್ತ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ.**

## ಅಕ್ಟೋಬರ್ 15 ಮತ್ತು 16 ರಂದು ನಡೆದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದ ಆಯ್ದ ಛಾಯಾಚಿತ್ರಗಳು




ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
Nov-2022, Vol. No.33, Issue No. 2, Price Rs.1/-
RNI Regn. No. 53405/91, DL-SW-01/4016/22-24
Date of Publication : Nov 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

# ಅಕ್ಟೋಬರ್ ೨೯ ಮತ್ತು ೩೦ ರಂದು ನಡೆದ ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಲೆನಾಡು ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದ ಆಯ್ದ ಛಾಯಾ ಚಿತ್ರಗಳು


















